ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ


Volume: 01, Issue: 135 RNI Number : KNKAN/25/A2770 24-05-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :135 ರಾಯಚೂರು 24-05-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಮತ್ತೆ ಇಂಧನ ದರ ಏರಿಕೆ: 10 ದಿನಗಳಲ್ಲಿ 3 ನೇ ಬಾರಿಗೆ ಹೆಚ್ಚಳ

ನವದೆಹಲಿ,ಮೇ 23

ಇಂದು ಮತ್ತೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಏರಿಕೆಯಾಗಿವೆ. ಪೆಟ್ರೋಲ್ ಮೇಲೆ 87 ಪೈಸೆ ಮತ್ತು ಡೀಸಲ್ ದರಗಳಲ್ಲಿ ಲೀಟರ್‌ಗೆ 91 ಪೈಸೆಯವರೆಗೆ ಹೆಚ್ಚಿಸಲಾಗಿದೆ. ಇದು 10 ದಿನಗಳಿಗಿಂತ ಕಡಿಮೆ ಅವಧಿಯಲ್ಲಿ ಮೂರನೇ ಹೆಚ್ಚಳವಾಗಿದೆ. ದೆಹಲಿಯಲ್ಲಿ ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 98.64 ರೂ.ಗಳಿಂದ 99.51 ರೂ.ಗಳಿಗೆ 87 ಪೈಸೆ ಹೆಚ್ಚಿಸಲಾಗಿದೆ. ಡೀಸೆಲ್ ದರಗಳು 91.58 ರೂ.ಗಳಿಂದ 92.49 ರೂ.ಗಳಿಗೆ 91 ಪೈಸೆ ಹೆಚ್ಚಿಸಲಾಗಿದೆ.



ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಂಟಾದ ಹೆಚ್ಚಿದ ಇಂಧನ ಬೆಲೆಗಳನ್ನು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಮಾಪನಾಂಕ ನಿರ್ಣಯಿಸಿದ ರೀತಿಯಲ್ಲಿ ವರ್ಗಾಯಿಸಲು ಪ್ರಾರಂಭಿಸಿದ ಮೇ 15 ರಿಂದ ಇದು ಮೂರನೇ ದರ ಏರಿಕೆಯಾಗಿದೆ. ಮೇ 15 ರಂದು ಬೆಲೆಗಳನ್ನು ಲೀಟರ್‌ಗೆ 3 ರೂ.ಗಳಷ್ಟು ಹೆಚ್ಚಿಸಲಾಯಿತು, ನಂತರ ಮೇ 19 ರಂದು 90 ಪೈಸೆ ಹೆಚ್ಚಳವಾಯಿತು. ಒಟ್ಟಾರೆಯಾಗಿ, ದರಗಳು ಲೀಟರ್‌ಗೆ ಸುಮಾರು 5 ರೂ.ಗಳಷ್ಟು ಹೆಚ್ಚಾಗಿದೆ. ಕೋಲ್ಕತ್ತಾದಲ್ಲಿ ಪೆಟ್ರೋಲ್ 110.57 ರೂ. ಡೀಸೆಲ್ 96.04 ರೂ. ಆಗಿದೆ. ಮುಂಬೈನಲ್ಲಿ ಪೆಟ್ರೋಲ್ 107.56 ರೂ. ಡೀಸೆಲ್, 94.05 ರೂ.ಚೆನ್ನೈನ'ಲ್ಲಿ ಪೆಟ್ರೋಲ್ 104.54 ರೂ. ಡೀಸೆಲ್ 96.16 ರೂ. ಆಗಿದೆ.

ದರ ಏರಿಕೆಗೆ ಅಸಲಿ ಕಾರಣ ವೇನು? ಮಧ್ಯಪ್ರಾಚ್ಯದಲ್ಲಿ ತಲೆದೂರಿರುವ ಯುದ್ಧದ ವಾತಾವರಣ ಮತ್ತು ಯುಎಸ್-ಇರಾನ್ ನಡುವಿನ ಶಾಂತಿ ಮಾತುಕತೆಗಳ ಸುತ್ತಲಿನ ಅನಿಶ್ಚಿತತೆಯೇ ಈ ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ. ಇದರಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಗಳು ತೀವ್ರ ಏರಿಳಿತ ಕಾಣುತ್ತಿವೆ.

ಬ್ರೆಂಟ್ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ 104 ಡಾಲರ್‌ಗಿಂತ ಹೆಚ್ಚಾಗಿದ್ದರೆ, ಯುಎಸ್ ವೆಸ್ಟ್ ಟೆಕ್ಸಾಸ್ ಇಂಟರ್ಮೀಡಿಯೇಟ್ ಕಚ್ಚಾ ತೈಲವು ಬ್ಯಾರೆಲ್‌ಗೆ 97 ಡಾಲರ್ ಆಸುಪಾಸಿನಲ್ಲಿ ವಹಿವಾಟು ನಡೆಸಿದೆ. ಜಾಗತಿಕ ಪೂರೈಕೆಯ ಕಳವಳಗಳ ಮಧ್ಯೆ ಒಂದು ಹಂತದಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ ಬರೋಬ್ಬರಿ 111 ಡಾಲರ್‌ಗೆ ತಲುಪಿದೆ.

ತೈಲ ಕಂಪನಿಗಳಿಗೆ ಆಗ್ತಿದ್ದ ಭಾರಿ ನಷ್ಟ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆಗಳು ಸತತವಾಗಿ ಏರುತ್ತಿದ್ದರೂ, ಭಾರತದ ಸರ್ಕಾರಿ ಸ್ವಾಮ್ಯದ ತೈಲ ಮಾರುಕಟ್ಟೆ ಕಂಪನಿಗಳು ತಿಂಗಳುಗಳಿಂದ ದೇಶೀಯ ಇಂಧನ ಬೆಲೆಗಳನ್ನು ಬದಲಾಯಿಸದೆ ಗ್ರಾಹಕರಿಗೆ ನೆರವಾಗಿದ್ದವು. ಆದರೆ, ಈ ಅವಧಿಯಲ್ಲಿ ಸಾರ್ವಜನಿಕ ವಲಯದ ತೈಲ ಕಂಪನಿಗಳು ಪ್ರತಿ ತಿಂಗಳು ಸುಮಾರು 1,000 ಕೋಟಿ ರೂ.ಗಳಷ್ಟು ಭಾರಿ ನಷ್ಟವನ್ನು ಅನುಭವಿಸುತ್ತಿದ್ದವು. ಹೀಗಾಗಿ ನಷ್ಟದ ಹೊರೆಯನ್ನು ತಗ್ಗಿಸಲು ಈಗ ಬೆಲೆ ಪರಿಷ್ಕರಣೆಯ ಮೂಲಕ ಆ ಹೊರೆಯ ಒಂದು ಭಾಗವನ್ನು ಗ್ರಾಹಕರ ಮೇಲೆ ವರ್ಗಾಯಿಸಲು ಕಂಪನಿಗಳು ಆರಂಭಿಸಿವೆ.

ಇಂಧನ ಆಘಾತ ಎದುರಿಸಲು ಭಾರತ ಸಜ್ಜು: ಹರ್ದೀಪ್ ಸಿಂಗ್ ಪುರಿ ಇತ್ತೀಚೆಗೆ ನಡೆದ ಸಿಐಐ ವಾರ್ಷಿಕ ವ್ಯವಹಾರ ಶೃಂಗಸಭೆ 2026 ರಲ್ಲಿ ಮಾತನಾಡಿದ್ದ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರು, ಯಾವುದೇ ಕೊರತೆಯಾಗದಂತೆ ದೇಶಾದ್ಯಂತ ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿಯ

3ನೇ ಪುಟಕ್ಕೆ

ರಾಯಚೂರಿನಲ್ಲಿ ಜೂ.28 ರಿಂದ 30 ರವರೆಗೆ 26ನೇ ಮುಂಗಾರು ಹಬ್ಬ ಅದ್ದೂರಿ ಯೋಜನೆ

ಜಂಬೂ ಸವಾರಿ ಮಾದರಿಯ ಭವ್ಯ ಮೆರವಣಿಗೆ-ಎ.ಪಾಪಾರೆಡ್ಡಿ

ನಿಮ್ಮೂರ ಸುದ್ದಿ

ರಾಯಚೂರು, ಮೇ.23-

ರಾಜ್ಯ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಅತ್ಯಂತ ಜನಪ್ರಿಯ ಸಾಂಸ್ಕೃತಿಕ ಉತ್ಸ ವಗಳಲ್ಲಿ ಒಂದಾದ 26ನೇ ಮುಂಗಾರು ಸಾಂಸ್ಕೃತಿಕ ರಾಯಚೂರು ಹಬ್ಬವನ್ನು ಜೂನ್ 28, 29 ಮತ್ತು 30ರಂದು ಮೂರು ದಿನಗಳ ಕಾಲ ಅದ್ದೂರಿಯಾಗಿ ಆಯೋಜಿಸಲಾಗುತ್ತಿದೆ ಎಂದು ಮುನ್ನೂರು ಕಾಪು ಸಮಾಜದ ಹಿರಿಯ ಮುಖಂಡ ಹಾಗೂ ಮಾಜಿ ಶಾಸಕ ಎ. ಪಾಪಾರೆಡ್ಡಿ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 25 ವರ್ಷಗಳಿಂದ ಮುನ್ನೂರು ಕಾಪು



ಸಮಾಜವು ಈ ಹಬ್ಬವನ್ನು ವೈಭವದಿಂದ ಆಚರಿಸುತ್ತಾ ಬಂದಿದ್ದು, ಈ ವರ್ಷ ಇನ್ನಷ್ಟು ವಿಶೇಷ ಹಾಗೂ ವೈವಿ ಧ್ಯಮಯ ಕಾರ್ಯಕ್ರಮಗಳೊಂದಿಗೆ ಹಬ್ಬವನ್ನು ನಡೆಸಲಾಗುತ್ತಿದೆ ಎಂದು ಹೇಳಿದರು.

ಜೂನ್ 28ರಂದು ಕರ್ನಾಟಕ ರಾಜ್ಯದ ಎತ್ತುಗಳಿಗೆ ಮಾತ್ರ ಒಂದು ವರೆ ಟನ್ ಭಾರದ ಕಲ್ಲು ಎಳೆಯುವ ಸ್ಪರ್ಧೆ ನಡೆಯಲಿದ್ದು, ವಿಜೇತ ಏಳು ಎತ್ತುಗಳಿಗೆ ಬಹುಮಾನ ನೀಡಲಾಗುತ್ತದೆ. ಪ್ರಥಮ ಬಹುಮಾನ ₹75 ಸಾವಿರ, ದ್ವಿತೀಯ ₹55 ಸಾವಿರ, ತೃತೀಯ ₹45 ಸಾವಿರ ಸೇರಿದಂತೆ ಏಳನೇ ಬಹುಮಾನವಾಗಿ ₹10 ಸಾವಿರ ವರೆಗೆ ನಿಗದಿಪಡಿಸಲಾಗಿದೆ.

ಜೂನ್ 29ರಂದು ಕರ್ನಾಟಕ ಹಾಗೂ ಆಂಧ್ರ ಪ್ರದೇಶದ ಎತ್ತುಗಳಿಗೆ 2 ಟನ್ ಭಾರದ ಕಲ್ಲು ಎಳೆಯುವ ಸ್ಪರ್ಧೆ ನಡೆಯಲಿದ್ದು, ಪ್ರಥಮ ಬಹುಮಾನ ₹90 ಸಾವಿರ ಹಾಗೂ ಏಳನೇ ಬಹುಮಾನ ₹20 ಸಾವಿರ ನೀಡಲಾಗುತ್ತದೆ.

ಜೂನ್ 30ರಂದು ಅಖಿಲ ಭಾರತ ಮಟ್ಟದ ಮುಕ್ತ ಎರಡುವರೆ ಟನ್ ಭಾರದ ಕಲ್ಲು ಎಳೆಯುವ ಸ್ಪರ್ಧೆ ನಡೆಯಲಿದ್ದು, ವಿಜೇತ ಎತ್ತುಗಳಿಗೆ ಪ್ರಥಮ ಬಹುಮಾನವಾಗಿ ₹1 ಲಕ್ಷ ಘೋಷಿಸಲಾಗಿದೆ. ದ್ವಿತೀಯ ಬಹುಮಾನ ₹75 ಸಾವಿರ ಹಾಗೂ ಇತರೆ ಬಹುಮಾನಗಳನ್ನೂ ವಿತರಿಸಲಾಗುತ್ತದೆ.

ಜೂನ್ 29ರ ಕಾರ ಹುಣ್ಣಿಮೆ ದಿನ ಸಂಜೆ ನಗರದಲ್ಲಿ ಜಂಬೂ ಸವಾರಿ ಮಾದರಿಯ ಬೃಹತ್ ಮೆರವಣಿಗೆ ಆಯೋಜಿಸಲಾಗಿದ್ದು, ಇದು ಜನಮನ ಸೆಳೆಯಲಿದೆ ಎಂದು ಪಾಪಾರೆಡ್ಡಿ ಹೇಳಿದರು. ಮೈಸೂರಿನ ಜಂಬೂಸವಾರಿ ಬಳಿಕ ಈ ರೀತಿಯ ವೈಭವಮಯ ಮೆರವಣಿಗೆಯನ್ನು ರಾಯಚೂರಿನಲ್ಲಿ ಮುನ್ನೂರು ಕಾಪು ಸಮಾಜ ಆಯೋಜಿಸುತ್ತಿರುವುದು ವಿಶೇಷವಾಗಿದೆ ಎಂದರು.

3ನೇ ಪುಟಕ್ಕೆ

ಬೆಂಗಳೂರುಮುಂಬೈ ಸ್ಲೀಪರ್ ವಂದೇ ಭಾರತ ರೈಲು ಸಂಚಾರ ಖಚಿತ


ರಾಯಚೂರು ಸೇರಿ ಉತ್ತರ ಕರ್ನಾಟಕಕ್ಕೆ ಮಹತ್ವದ ರೈಲು ಸೌಲಭ್ಯ

ರಾಯಚೂರು, ಮೇ 23- ನಿಮ್ಮೂರ ಸುದ್ದಿ

ಬೆಂಗಳೂರುಮುಂಬೈ ಮಧ್ಯ ಹೊಸ ಸ್ಲೀಪರ್ ವಂದೇ ಭಾರತ ರೈಲು ಸಂಚಾರವನ್ನು ರೈಲ್ವೆ ಇಲಾಖೆ ಖಚಿತಪಡಿಸಿದೆ ಎಂದು ರೈಲ್ವೆ ಸಲಹಾ ಸಮಿತಿ ಮಾಜಿ ಸದಸ್ಯ ಡಾ. ಬಾಬುರಾವ್ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಹೊಸ ರೈಲು ಬೆಂಗಳೂರಿನಿಂದ ಗುಂತಕಲ್, ರಾಯಚೂರು, ಕಲಬುರಗಿ ಹಾಗೂ ಸೊಲ್ಲಾಪೂರ ಮಾರ್ಗವಾಗಿ ಮುಂಬೈಗೆ ಸಂಚರಿಸಲಿದೆ ಎಂದು ಹೇಳಿದ್ದಾರೆ. ಟಿಕೆಟ್ ದರವನ್ನು ಮೂರನೇ ದರ್ಜೆ ಎಸಿಗೆ ಪ್ರತಿ ಕಿ.ಮೀಗೆ ಜಿಎಸ್‌ಟಿ ಸೇರಿ ರೂ.2.30, ದ್ವಿತೀಯ ದರ್ಜೆ ಎಸಿಗೆ ರೂ.3.10 ಹಾಗೂ ಪ್ರಥಮ ದರ್ಜೆ ಎಸಿ?ಗೆ ರೂ.3.80 ಎಂದು ನಿಗದಿಪಡಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ರೈಲು ಸಂಚಾರ ಆರಂಭದ ದಿನಾಂಕವನ್ನು ಶೀಘ್ರದಲ್ಲೇ ಅಧಿಕೃತವಾಗಿ ಪ್ರಕಟಿಸಲಾಗುವುದು ಎಂದಿದ್ದಾರೆ.

ಪ್ರಸ್ತುತ ಉದ್ಯಾನ ಎಕ್ಸ್‌ಪ್ರೆಸ್ ಹೊರತುಪಡಿಸಿ



ಬೆಂಗಳೂರು ಮುಂಬೈ ನಡುವೆ ನೇರ ರೈಲು ಸೌಲಭ್ಯಗಳ ಕೊರತೆ ಇತ್ತು. ಇದೀಗ ಹೊಸ ಸ್ಲೀಪರ್ ವಂದೇ ಭಾರತ ರೈಲು ಸಂಚಾರ ಆರಂಭವಾದರೆ ಪ್ರಯಾಣಿಕರಿಗೆ ವೇಗದ ಹಾಗೂ ಆಧುನಿಕ ಸೇವೆ ಲಭ್ಯವಾಗಲಿದೆ. ಈ ರೈಲು ಉದ್ಯಾನ ಎಕ್ಸ್ ಪ್ರೆಸ್‌ಗಿಂತ ಸುಮಾರು 9 ಗಂಟೆಗಳಷ್ಟು

3ನೇ ಪುಟಕ್ಕೆ

ಕನ್ನಡ ಹೋರಾಟಗಾರರ ಮೇಲಿನ ಎಲ್ಲ ಪ್ರಕರಣ ಹಿಂಪಡೆಯಲಿ ಸರ್ಕಾರ ಮಾತಿನಂತೆ ನಡೆಯಬೇಕು: ವಿನೋದರೆಡ್ಡಿ ಎಂ. ಆಗ್ರಹ

ನಿಮ್ಮೂರ ಸುದ್ದಿ

ರಾಯಚೂರು, ಮೇ.23

ಕನ್ನಡಪರ ಹಾಗೂ ರೈತಪರ ಹೋರಾಟಗಾರರ ವಿರುದ್ಧ ದಾಖಲಾಗಿರುವ ಎಲ್ಲಾ ಚಳವಳಿ ಸಂಬಂಧಿತ ಪ್ರಕರಣಗಳನ್ನು ಸಂಪೂರ್ಣವಾಗಿ ಹಿಂಪಡೆಯಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಅಧ್ಯಕ್ಷ ವಿನೋದರೆಡ್ಡಿ ಎಂ. ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ರಾಜ್ಯ ಸಚಿವ ಸಂಪುಟವು ಇತ್ತೀಚೆಗೆ ಕೆಲವು ಪ್ರಕರಣಗಳನ್ನು ಹಿಂಪಡೆಯಲು ತೀರ್ಮಾನಿಸಿದ್ದು, ಅವುಗಳಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಅವರ ಮೇಲಿನ ಎರಡು ಪ್ರಕರಣಗಳೂ ಸೇರಿವೆ



ಎಂದು ಮಾಧ್ಯಮಗಳಲ್ಲಿ ವರದಿಯಾ ಗಿರುವ ಹಿನ್ನೆಲೆ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜ್ಯಾಧ್ಯಕ್ಷರ ವಿರುದ್ಧ ಒಟ್ಟು 27 ಪ್ರಕರಣಗಳಿದ್ದು, ಅವೆಲ್ಲವೂ ಕನ್ನಡ ಚಳವಳಿಗೆ ಸಂಬಂಧಿಸಿದ ಪ್ರಕರಣಗಳಾಗಿವೆ. ಯಾವುದೇ ವೈಯಕ್ತಿಕ ದಾಳಿ, ಹಲ್ಲೆ ಅಥವಾ ಸಮಾಜದಲ್ಲಿ ಸಂಘರ್ಷ ಉಂಟು ಮಾಡುವ ಪ್ರಕರಣಗಳಲ್ಲ ಎಂದು ಅವರು ಸ್ಪಷ್ಟಪಡಿಸಿದರು. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕನ್ನಡಪರ ಹೋರಾಟಗಾರರ ವಿರುದ್ಧ ನೂರಾರು ಪ್ರಕರಣಗಳು ದಾಖಲಾಗಿದ್ದು, ಅವುಗಳ ಸಂಪೂರ್ಣ ವಿವರಗಳನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದರು.

ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹ ಸಚಿವರು ಹಾಗೂ ಕಾನೂನು ಸಚಿವರು ಹಲವು ಬಾರಿ ಎಲ್ಲಾ ಪ್ರಕರಣಗಳನ್ನು ಹಿಂಪಡೆಯುವುದಾಗಿ ಭರವಸೆ ನೀಡಿದ್ದರೂ, ಈಗ ಕೇವಲ ಎರಡು ಪ್ರಕರಣಗಳನ್ನು ಮಾತ್ರ ಹಿಂಪಡೆಯಲು ಮುಂದಾಗಿರುವುದು ಕನ್ನಡ ಹೋರಾಟಗಾರರನ್ನು ನಿರ್ಲಕ್ಷಿಸುವ ಕ್ರಮವಾಗಿದೆ ಎಂದು ಆರೋಪಿಸಿದರು.

ಕನ್ನಡ ನಾಮಫಲಕ ಚಳವಳಿಯ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರವೇ ಒಂದೇ ದಿನ ರಾಜ್ಯಾಧ್ಯಕ್ಷರ ವಿರುದ್ಧ 17 ಪ್ರಕರಣಗಳನ್ನು ದಾಖಲಿಸಿ, 16 ದಿನಗಳ ಕಾಲ ಜೈಲಿಗೂ ಕಳುಹಿಸಿತ್ತು. ಆ ಪ್ರಕರಣಗಳು ಇನ್ನೂ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿವೆ ಎಂದು ಹೇಳಿದರು.

ಕನ್ನಡ ಚಳವಳಿಯನ್ನು ದುರ್ಬಲ ಗೊಳಿಸುವ ಉದ್ದೇಶದಿಂದಲೇ ಹೋರಾಟಗಾರರ ವಿರುದ್ಧ ಪ್ರಕರಣಗಳನ್ನು ಮುಂದುವರಿಸಲಾಗುತ್ತಿದೆ ಎಂಬ ಅನುಮಾನ ವ್ಯಕ್ತಪಡಿಸಿದ ಅವರು, ''ಕನ್ನಡಕ್ಕಾಗಿ ಸಾವಿರ ಪ್ರಕರಣಗಳನ್ನು ದಾಖಲಿಸಿದರೂ ನಾವು ಹೋರಾಟದಿಂದ ಹಿಂದೆ

3ನೇ ಪುಟಕ್ಕೆ

ಶಿಕ್ಷಕರ ನೇಮಕಾತಿಗೆ ಆಗ್ರಹಿಸಿ ಮೇ 25ರಂದು ಬೃಹತ್ ಪ್ರತಿಭಟನೆ

ನಿಮ್ಮೂರ ಸುದ್ದಿ

ರಾಯಚೂರು,ಮೇ.23-

ರಾಜ್ಯ ಸರ್ಕಾರವು ತಕ್ಷಣವೇ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಬೇಕು ಎಂದು ಆಗ್ರಹಿಸಿ ಮೇ 25ರಂದು ರಾಯಚೂರಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ () ರಾಜ್ಯ ಸಹ ಸಂಚಾಲಕ ಚನ್ನಬಸವ ಜಾಣಕಲ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಶಿಕ್ಷಕರ ನೇಮಕಾತಿ ವಿಚಾರದಲ್ಲಿ ಸಂಪೂರ್ಣ ನಿರ್ಲಕ್ಷ್ಯ ವಹಿಸಿದ್ದು, ಸಾವಿರಾರು ಹುದ್ದೆಗಳು ಖಾಲಿ ಇದ್ದರೂ ನೇಮಕಾತಿ ಪ್ರಕ್ರಿಯೆ ಆರಂಭಿಸದಿರುವುದು ಶಿಕ್ಷಣ



ವ್ಯವಸ್ಥೆಗೆ ದೊಡ್ಡ ಹೊಡೆತವಾಗಿದೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ ಒಟ್ಟು 79,694 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಕಲ್ಯಾಣ ಕರ್ನಾಟಕ ಭಾಗದಲ್ಲೇ 22,395 ಶಿಕ್ಷಕರ ಹುದ್ದೆಗಳು ಖಾಲಿ ಉಳಿದಿವೆ. ಪ್ರಾಥಮಿಕ ಶಾಲೆಗಳಲ್ಲಿ 14,317 ಹಾಗೂ ಪ್ರೌಢ ಶಾಲೆಗಳಲ್ಲಿ 4,278 ಹುದ್ದೆಗಳು ಖಾಲಿ ಇವೆ ಎಂದು ಹೇಳಿದರು.

ರಾಯಚೂರು ಜಿಲ್ಲೆಯಲ್ಲಿ ಪರಿಸ್ಥಿತಿ ಗಂಭೀರವಾಗಿದ್ದು, ಪ್ರಾಥಮಿಕ ಶಾಲೆಗಳ 8,460 ಅನುಮೋದಿತ ಹುದ್ದೆಗಳ ಪೈಕಿ ಕೇವಲ 3,900 ಶಿಕ್ಷಕರು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ. 4,560 ಹುದ್ದೆಗಳು ಖಾಲಿ ಇವೆ. ಪ್ರೌಢಶಾಲೆಗಳ 2,239 ಹುದ್ದೆಗಳ ಪೈಕಿ 1,064 ಹುದ್ದೆಗಳು ಖಾಲಿ ಇವೆ ಎಂದು ತಿಳಿಸಿದರು.

ದೇವದುರ್ಗ ತಾಲೂಕಿನ 105 ಶಾಲೆಗಳಲ್ಲಿ ಖಾಯಂ ಶಿಕ್ಷಕರೇ ಇಲ್ಲದೆ ಅತಿಥಿ ಶಿಕ್ಷಕರ ಮೂಲಕ ಶಾಲೆಗಳು ನಡೆಯುತ್ತಿವೆ. ಇದರಿಂದ ಶಿಕ್ಷಣದ ಗುಣಮಟ್ಟ ಕುಸಿತವಾಗುತ್ತಿದ್ದು, ವಿದ್ಯಾರ್ಥಿಗಳ ಭವಿಷ್ಯಕ್ಕೆ ಧಕ್ಕೆಯಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಒಂದು ಲಕ್ಷ ಹುದ್ದೆಗಳನ್ನು ಭರ್ತಿ ಮಾಡುವ

3ನೇ ಪುಟಕ್ಕೆ

ಸಾಲುಗುಂದಲ್ಲಿ ಗ್ಯಾಸ್ ಏಜೆನ್ಸಿಯಿಂದ ಬ್ಲಾಕ್ ಮಾರಾಟ: ಗ್ರಾಮಸ್ಥರ ಪ್ರತಿಭಟನೆ

ನಿಮ್ಮೂರ ಸುದ್ದಿ

ಸಿಂಧನೂರು,ಮೇ.23-

ತಾಲೂಕಿನ ಸಾಲುಗುಂದ ಹೋಬಳಿಯಲ್ಲಿ ಭಾರತ ಗ್ಯಾಸ್ ಸಿಲಿಂಡರ್ ಏಜೆನ್ಸಿ ಮಾಲೀಕರು ಶರಣಪ್ಪ ಎಂಬವರು ಅವರು ಸಿಬ್ಬಂದಿ ವರ್ಗದವರು ಸಿಲಿಂಡರ್ ಗ್ರಾಹಕರಲ್ಲಿ ಗ್ಯಾಸ್ ಬುಕ್ ಮಾಡುತ್ತವೆ ಎಂದು ಫೋನ್ ಕರೆ ಮಾಡಿ ಗ್ರಾಹಕರು ಮೂಲಕ ಓಟಿಪಿ ಪಡೆದುಕೊಂಡು ಬೇರೆ ಕಡೆಗೆ ಭಾರತ ಗ್ಯಾಸ್ ಸಿಲಿಂಡರ್ ಗಳನ್ನು ಬ್ಲಾಕ್ ನಲ್ಲಿ ಮಾರಿಕೊಂಡಿದ್ದಾರೆ.

ಸಾಲಗುಂದ ಹೋಬಳಿಯ ಸುತ್ತ ಮುತ್ತಲಿನ ಸಾರ್ವಜನಿಕರು ಆರೋಪ ಮಾಡಿ ಗ್ಯಾಸ್ ಸಿಲಿಂಡರ್ ವಾಹನ ತಡೆದು ಪ್ರತಿಭಟನೆ ನಡೆಸಿದರು.

ಅಮೆರಿಕಾ ಇಸ್ರೇಲ್ ಮತ್ತು ಇರಾನ್ ನಡುವೆಯುದ್ಧ ಆರಂಭ



ಹಿನ್ನೆಯಲ್ಲಿ ಭಾರತ ಕರ್ನಾಟಕ ದೇಶಗಳಲ್ಲಿ ಗ್ಯಾಸ್ ಸಿಲಿಂಡರ್ ಸಿಗದೇ ಸಾರ್ವಜನಿಕರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಆದರೆ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಸಾಲಗುಂದ ಹೋಬಳಿಯಲ್ಲಿ ಭಾರತ ಗ್ಯಾಸ್ ಸಿಲಿಂಡರ್ ಮಾಲೀಕರು ಸಿಲಿಂಡರ್ ಗಳನ್ನು, ಸುಮಾರು ಒಂದು ವರಿ ತಿಂಗಳಿಂದ ಗ್ಯಾಸ್ ಸಿಲಿಂಡರ್ ಸಾವ ರ್ಜನಿಕರಿಗೆ ವಿತರಣೆ ಮಾಡದೇ ಬ್ಲಾಕ್ ನಲ್ಲಿ ಮಾರಾಟ ಮಾಡಿದ್ದರಿಂದ ಇವತ್ತು ಸಾಲಗುಂದ ಹೋಬಳಿಯಲ್ಲಿ ಸಾರ್ವಜನಿಕರಿಗೆ ಸಿಲಿಂಡರ್ ತೆಗೆದುಕೊಂಡು ಭಾರತಗ್ಯಾಸ್ ಗೋಡೌನ್ ಮುಂದೆ ಎರಡು ದಿನದಿಂದ ಸುಮಾರು ಎರಡು ಸಾವಿರ ಸಿಲಿಂಡರ್ ರಷ್ಟು ಗ್ರಾಹಕರು ಸಾಲುಗಟ್ಟಿ ನಿಂತಿದ್ದಾರೆ.

ಆದರೆ ಇದು ಯಾವುದನ್ನೂ ಲೆಕ್ಕಿಸದೆ ಭಾರತ ಗ್ಯಾಸ್ ಸಿಲಿಂಡರ್ ಮಾಲೀಕರಾದ ಶರಣಪ್ಪ ಹಾಗೂ ಅವರು ಸಿಬ್ಬಂದಿ ವರ್ಗದವರು ಗೋಡೌನ್ ಲಾಕ್ ಮಾಡಿ ಕೊಂಡು ಮೊಬೈಲ್ ಸ್ವಿಚ್ ಆಫ್ ಮಾಡಿ ಕೊಂಡಿರುವುದು ಎಂತಹ ವಿಪರ್ಯಾಸ ಜನರು ಆಕ್ರೋಶ ವ್ಯಕ್ತಪಡಿಸಿದರು

ಇಂಡಿಯನ್ ಹಾಗೂ ಎಚ್ ಪಿ ಗ್ಯಾಸ್ ಸಿಲಿಂಡರ್ ಗಳು ಬುಕ್ ಮಾಡಿದರೆ ಒಂದು ವಾರದಲ್ಲಿ ಅಥವಾ ಎಮರ್ಜೆನ್ಸಿ ಅಂತಹ ಹೇಳಿದರೆ ಗ್ಯಾಸ್ ಸಿಲಿಂಡರ್ ಮಾಲೀಕರು ಸಾರ್ವಜನಿಕರು ಹಿತ ದೃಷ್ಟಿಯಿಂದ ಸಿಬ್ಬಂದಿ ವರ್ಗದವರು ಮೂಲಕ ಕಳಿಸುತ್ತಾರೆ. ಆದರೆ ಭಾರತ ಗ್ಯಾಸ್ ಸಿಲಿಂಡರ್ ಮಾಲೀಕರು ಎರಡು ಹಿಂದೆ ಎರಡು ಲಾರಿ ಗ್ಯಾಸ್ ಸಿಲಿಂಡರ್ ಗಳನ್ನು (ಭಾರತ ಗ್ಯಾಸ್) ಬ್ಲಾಕ್ ನಲ್ಲಿ ಹೆಚ್ಚಿಗೆ ಹಣದಲ್ಲಿ ಮಾಡಿಕೊಂಡಿದ್ದಾರೆ. ಈಗಾಗಿ ನಮಗೆ ಭಾರತ ಗ್ಯಾಸ್ ಸಿಲಿಂಡರ್ ಗಾಗಿ ಸಾಲುಗಟ್ಟಿ ನಿಂತಿದ್ದೇವೆ. ಸಾಲಗುಂದ ಹೋಬಳಿಯ ಭಾರತ ಗ್ಯಾಸ್ ಸಿಲಿಂಡರ್

3ನೇ ಪುಟಕ್ಕೆ

ಶಸ್ತ್ರ ಚಿಕಿತ್ಸೆ ಇಲ್ಲದೆ ಅನ್ನನಾಳದಲ್ಲಿನ ಕೋಳಿ ಮಾಂಸದ ಎಲುಬು ತೆಗೆದ:ಡಾ.ರಾಹುಲ್ ನಾಯ್ಕೋಡಿ



ನಿಮ್ಮೂರ ಸುದ್ದಿ

ಯಾದಗಿರಿ,ಮೇ.23-

ತಾಲೂಕಿನ ರಾಮಸಮುದ್ರ ಗ್ರಾಮದ ನಿವಾಸಿ ವಿಶ್ವನಾಥ್ (50) ಎಂಬುವರು ಊಟ ಮಾಡುವ ಸಮಯದಲ್ಲಿ ಆಕಸ್ಮಿಕವಾಗಿ ಕೋಳಿ ಮಾಂಸದಲ್ಲಿನ ದೊಡ್ಡದಾದ ಎಲುಬು ಗಂಟಲಿನ ಕೆಳಭಾಗದ ಅನ್ನನಾಳದಲ್ಲಿ ಸಿಲುಕಿಕೊಂಡ ಪರಿಣಾಮ ಆರೋಗ್ಯದಲ್ಲಿ ಏರುಪೇರಾಗಿ ನಗರದ ನಾಯ್ಕೋಡಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಾಗಿದ್ದರು. ಶಸ್ತ್ರ ಚಿಕಿತ್ಸೆ ಇಲ್ಲದೆ ನಗರದ ನಾಯ್ಕೋಡಿ ಆಸ್ಪತ್ರೆಯ ಕಿವಿ ಮೂಗು ಗಂಟಲು ರೋಗ ತಜ್ಞ ಡಾ. ರಾಹುಲ್.ಎಸ್ ನಾಯ್ಕೋಡಿ ನೇತೃತ್ವದ ವೈದ್ಯರ ತಂಡ ಶಸ್ತ್ರ ಚಿಕಿತ್ಸೆ ಇಲ್ಲದೆ ಇಸೂಫಾಗೂಸ್ಕೋಪಿ ಮೂಲಕ ಕೋಳಿ ಮಾಂಸದ ಎಲುಬನ್ನು ಯಶಸ್ವಿಯಾಗಿ ಹೊರ ತೆಗೆದು ವಿಶ್ವನಾಥನ ಪ್ರಾಣ ರಕ್ಷಿಸಿದ್ದಾರೆ.ಈ ಕುರಿತ ಡಾ.ರಾಹುಲ್.ಎಸ್ ನಾಯ್ಕೋಡಿ ಮಾತನಾಡಿ ನಮ್ಮ ಆಸ್ಪತ್ರೆಗೆ ಯಾದಗಿರಿ ಸಮೀಪ ರಾಮಸಮುದ್ರ ಗ್ರಾಮದ ವಿಶ್ವನಾಥ್ ಎಂಬುವರು ನಮ್ಮ ಆಸ್ಪತ್ರೆಗೆ ದಾಖಲಾಗಿದ್ದರು.ನಾವು ಕೆಲವು ಪರೀಕ್ಷೆಗಳನ್ನು ಮಾಡುವ ಮೂಲಕ ಅದನ್ನು ಪತ್ತೆ ಹಚ್ಚಿದೆವು ಅದು

3ನೇ ಪುಟಕ್ಕೆ

ಔರಾದನಲ್ಲಿ 7.5 ಕೋಟಿಯ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ಗುಣಮಟ್ಟದಲ್ಲಿ ಲೋಪವಾದರೆ ಸಹಿಸುವುದಿಲ್ಲ: ಶಾಸಕ ಚವ್ಹಾಣ



ಔರಾದ್,ಮೇ.23-

ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಮೇ.22 ರಂದು ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಸಂಚರಿಸಿ ಸುಮಾರು 7.5 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಸಾವರಗಾಂವ ಗ್ರಾಮದಲ್ಲಿ 30 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಕಾಮಗಾರಿ, ಬಾವಲಗಾಂವದಲ್ಲಿ 70 ಲಕ್ಷ ರೂ. ವೆಚ್ಚದ ಕೆರೆ ದುರಸ್ತಿ ಕಾಮಗಾರಿ, ಹೊಕ್ರಾಣಾದಲ್ಲಿ 50 ಲಕ್ಷ ರೂ. ವೆಚ್ಚದ ಪ್ರಾಥಮಿಕ ಉಪ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣ, ನಂದಿ ಬಿಜಲಗಾಂವದಲ್ಲಿ 40 ಲಕ್ಷ ರೂ. ವೆಚ್ಚದ ಬ್ರಿಜ್ ಕಂ ಬ್ಯಾರೇಜ್ ಕಾಮಗಾರಿ, 32 ಲಕ್ಷ ರೂ. ವೆಚ್ಚದ ಗ್ರಾಮ ವಿಕಾಸ ಯೋಜನೆಯ ಕಾಮಗಾರಿ, ನಾರಾಯಣಪೂರ ಗ್ರಾಮದಲ್ಲಿ ನಾರಾಯಣಪೂರದಿಂದ ಅಲ್ಲಾಪೂರವರೆಗೆ 5 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿ, ಬೋಂತಿ ಗ್ರಾಮದಲ್ಲಿ 30 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿ, ಸಾರ್ವಜನಿಕರ ಅನುಕೂಲಕ್ಕಾಗಿ ಮಹತ್ವದ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿದೆ. ಎಲ್ಲ ಕಾಮಗಾರಿಗಳು ನಿಗದಿತ ಅವಧಿಯೊಳಗಾಗಿ ಮತ್ತು ಗುಣಮಟ್ಟದಿಂದ ಪೂರ್ಣಗೊಳಿಸಬೇಕು. ಮುಂದಿನ ದಿನಗಳಲ್ಲಿ ಕಾಮಗಾರಿಯ ಬಗ್ಗೆ ಯಾವುದೇ ರೀತಿಯ ದೂರುಗಳು ಬಾರದ ಹಾಗೆ ಕೆಲಸ ಮಾಡಬೇಕು. ಸಾರ್ವಜನಿಕರು ಕೂಡ ತಮ್ಮ ಗ್ರಾಮದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ನಿಗಾ ವಹಿಸಬೇಕು. ಕೆಲಸ ಸರಿಯಾಗಿ ಆಗುವಂತೆ ನೋಡಿಕೊಳ್ಳಬೇಕು. ಏನಾದರೂ ದೋಷಗಳು ಕಾಣಿಸಿದರೆ ನನ್ನ ಗಮನಕ್ಕೆ ತಂದರೆ ಸರಿಪಡಿ ಸುತ್ತೇನೆ ಎಂದು ಹೇಳಿದರು.

ರಸ್ತೆ ಕಾಮಗಾರಿ ಪರಿಶೀಲನೆ: ಯನಗುಂದಾದಿಂದ ಕರಂಜಿ(ಕೆ) ಸೋಪೂರ ಬಾರ್ಡರ್‌ವರೆಗೆ ನಡೆಯುತ್ತಿರುವ ರಸ್ತೆ ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ರಸ್ತೆ ಕಾಮಗಾರಿಯ ಗುಣಮಟ್ಟ, ಬಳಸಲಾಗುತ್ತಿರುವ ಸಾಮಗ್ರಿಗಳು ಹಾಗೂ ಕಾಮಗಾರಿ ಪ್ರಗತಿ ಕುರಿತು ಅಧಿಕಾರಿಗಳು ಮತ್ತು ಗುತ್ತಿಗೆದಾರರಿಂದ ಮಾಹಿತಿ ಪಡೆದರು.

ಯನಗುಂದಾ, ಕರಂಜಿ(ಬಿ), ರಾಯಪಳ್ಳಿ, ನಾಗವಾರಪಳ್ಳಿ ಕ್ರಾಸ್, ಚಿಂತಾಕಿ ಕ್ರಾಸ್, ಕರಂಜಿ(ಕೆ) ಗ್ರಾಮ ಗಳಿಗೆ ಅನುಕೂಲವಾಗುವ ಮಹತ್ವದ ರಸ್ತೆ ಇದಾಗಿದ್ದು, ಗುಣಮಟ್ಟದಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯ ನಡೆಯಬಾರದು. ರಸ್ತೆಗೆ ಬಳಕೆ ಮಾಡು ತ್ತಿರುವ ಕಲ್ಲು, ಜಲ್ಲಿ ಹಾಗೂ ಇನ್ನಿತರೆ ಉಪಕರಣಗಳು ಗುಣಮಟ್ಟದಿಂದ ಕೂಡಿರಬೇಕು.

ಡಾಂಬರೀಕರಣ ಸರಿಯಾಗಿ ಮಾಡಬೇಕು. ಸಾರ್ವಜ ನಿಕರ ಹಣದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು ನಿಯಮಾನುಸಾರ ಹಾಗೂ ಗುಣಮಟ್ಟದಿಂದ ಪೂರ್ಣಗೊಳಿಸಬೇಕು. ಕಾಮಗಾರಿಯ ಗುಣಮಟ್ಟದ ಕುರಿತು ಯಾವುದೇ ರೀತಿಯ ದೂರು ಗಳು ಬಂದರೆ ಸುಮ್ಮನಿರುವುದಿ ಲ್ಲವೆಂದು ಶಾಸಕರು ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಿದರು. ಇದೇ ವೇಳೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀ ಲಿಸಿದರು.

ಸಾಂತ್ವನ: ತೋರ್ಣಾ, ತೇಗಂಪೂರ, ಕರಂಜಿ(ಬಿ) ಹಾಗೂ ಮತ್ತಿತರೆ ಗ್ರಾಮಗಳಲ್ಲಿ ಇತ್ತೀಚೆಗೆ ನಿಧನರಾ ದವರ ಕುಟುಂಬಗಳಿಗೆ ಭೇಟಿ ನೀಡಿ ಸಾಂತ್ವನ ಹೇಳಿದರು. ತೋರ್ಣಾದಲ್ಲಿ ವೆಂಕಟ ನಾಗನಾಥ ಕೋಟೆ, ತೇಗಂಪೂರನಲ್ಲಿ ಪಾರ್ವತಿ ನಾಗಶೆಟ್ಟಿ ಮಜಗೆ, ಕರಂಜಿ(ಬಿ) ಗ್ರಾಮದ ಪದ್ಮಮ್ಮ ಬಸರೆಡ್ಡಿ ಪಾಟೀಲ ಅವರ ಮನೆಗೆ ತೆರಳಿ ಕುಟುಂಬಸ್ಥರಿಗೆ ಧೈರ್ಯ ತುಂಬಿದರು.

ಈ ಸಂದರ್ಭದಲ್ಲಿ ಮುಖಂಡರಾದ ಧೊಂಡಿಬಾ ನರೋಟೆ, ರಾಮಶೆಟ್ಟಿ ಪನ್ನಾಳೆ, ಮಾರುತಿ ಚವ್ಹಾಣ, ಸತೀಷ ಪಾಟೀಲ, ಶಿವರಾಜ ಅಲ್ಮಾಜೆ, ಮೃತ್ಯುಂಜಯ ಬಿರಾದಾರ, ರವೀಂದ್ರ ರೆಡ್ಡಿ, ರಾಮರೆಡ್ಡಿ, ಸುರೇಶ ಭೋಸ್ಲೆ, ಅರಹಂತ ಸಾವಳೆ, ಸುನೀಲ ಮೋರ್ಗೆ, ಉದಯ ಸೋಲಾಪೂರೆ, ಸಂಜು ಮುರ್ಕೆ, ವಿಲಾಸ ರಾಠೋಡ, ಜಗದೀಶ್ ಪಾಟೀಲ, ಅನೀಲ ಬಿರಾದಾರ, ವೀರಾ ರೆಡ್ಡಿ, ಬಸರೆಡ್ಡಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಬಕ್ರಿದ್ ವೇಳೆ ಅನಧಿಕೃತ ಜಾನುವಾರುಗಳ ವಧೆ, ಸಾಗಣೆಗೆ ಅವಕಾಶವಿಲ್ಲ: ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ



ಕೊಪ್ಪಳ ಮೇ 23-

ಮೇ 28ರಂದು ಆಚರಿಸಲಾಗುವ ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಯಾವುದೇ ರೀತಿಯ ಅನಧೀಕೃತ ಜಾನುವಾರುಗಳ ವಧೆ ಹಾಗೂ ಜಾನುವಾರುಗಳ ಸಾಗಣೆಗೆ ಅವಕಾಶವಿಲ್ಲ ಎಂದು ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಹೇಳಿದರು.

ಬಕ್ರೀದ್ ಆಚರಣೆ ಸಂದರ್ಭದಲ್ಲಿ ಅನಧೀಕೃತ ಜಾನುವಾರುಗಳ ವಧೆ ಹಾಗೂ ಜಾನುವಾರುಗಳ ಸಾಗಾಣಿಕೆಯನ್ನು ತಡೆಗಟ್ಟುವ ಕುರಿತು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮೇ 21ರಂದು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕರ್ನಾಟಕ ಜಾನುವಾರು ಹತ್ಯೆ ಪ್ರತಿಭಂದಕ ಕಾಯ್ದೆ ಮತ್ತು ಸಂರಕ್ಷಣೆ ಅಧಿನಿಯಮ-2020ರ ಅನ್ವಯ ಗೋ ಹತ್ಯೆ ನಿಷೇಧಿಸಲಾಗಿದೆ. ಎಲ್ಲಾ ವಯಸ್ಸಿನ ಆಕಳು, ಆಕಳು ಕರು, ಹೋರಿ, ಗೂಳಿ ಮತ್ತು 13 ವರ್ಷದೊಳಗಿನ ಎಮ್ಮೆ ಮತ್ತು ಕೋಣಗಳ ಹತ್ಯೆಯನ್ನು ನಿಷೇಧಿಸಲಾಗಿದೆ. ಹದಿಮೂರು ವರ್ಷ ಮೇಲ್ಪಟ್ಟ ಎಮ್ಮೆ ಅಥವಾ ಕೋಣವನ್ನು ಸಕ್ಷಮ ಪ್ರಾಧಿಕಾರಿಯ ಶಿಫಾರಸ್ಸಿನ ಮೇರೆಗೆ ವಧೆಗೆ ಅವಕಾಶ ನೀಡಲಾಗಿದೆ. ಉಳಿದ ಎಲ್ಲ ಜಾನುವಾರುಗಳ ವಧೆ ಯನ್ನು ಸಂಪೂರ್ಣ ನಿಷೇಧಿಸಲಾ ಗಿದೆ. ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಯಾವುದೇ ರೀತಿಯ ಕಾಯ್ದೆ ಉಲ್ಲಂಘನೆಯಾಗದಂತೆ ನೋಡಿಕೊಳ್ಳುವ ಅತ್ಯವಶ್ಯಕತೆ ಇದೆ. ಈ ಕುರಿತು ಪಶುಪಾಲನಾ ಇಲಾಖೆ, ಪೊಲೀಸ್ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ತಂಡಗಳನ್ನು ರಚಿಸಿ ಸೂಕ್ತ ನಿಗಾ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ.ರಾಮ್ ಎಲ್. ಅರಸಿದ್ದಿ ಅವರು ಮಾತನಾಡಿ, ರಾಜ್ಯ ಹಾಗೂ ಕೇಂದ್ರ ಸರ್ಕಾರವು ನಿಯಮಿಸಿದ ವಿಧಾನದಲ್ಲಿ ಕೃಷಿ ಅಥವಾ ಪಶುಸಂಗೋಪನೆಯ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರಿಯ ಜಾನುವಾರು ಸಾಗಣೆಯನ್ನು ಪರವಾನಿಗೆ ಪಡೆದು ಜಾನುವಾರು ಸಾಗಣೆ ಮಾಡಬೇಕು. ಅಪರಾಧ ಸಾಬೀತಾದಲ್ಲಿ ಮೂರರಿಂದ ಏಳು ವರ್ಷದವರೆಗೆ ಕಾರವಾಸ ಅಥವಾ ಒಂದು ಜಾನುವಾರಿಗೆ 50 ಸಾವಿರದಿಂದ 5 ಲಕ್ಷಗಳವರೆಗೆ ಜುಲ್ಮಾನೆಗೆ ಅವಕಾಶವಿರುತ್ತದೆ. ಕೃಷಿ ಅಥವಾ ಪಶುಸಂಗೋಪನೆಯ ಉದ್ದೇಶಕ್ಕೆಂದು ರಾತ್ರಿ ವೇಳೆ ಹಸು, ಕರು, ಎತ್ತು, ಎಮ್ಮೆ, ಕೋಣಗಳನ್ನು ಸಾಗಣೆ ಮಾಡುವಂತಿಲ್ಲ. ಪರವಾನಗಿ ಪಡೆದುಕೊಂಡಾಗ್ಯೂ ಮಾಲೀಕತ್ವದ ದಾಖಲೆ ಮತ್ತು ಪಶುವೈದ್ಯಕೀಯ ಪ್ರಥಮ ಚಿಕಿತ್ಸಾ ಪೆಟ್ಟಿಗೆ ಹೊಂದಿರಬೇಕು. ಪರವಾನಿಗೆ ಪಡೆದು ಸಾಗಣೆ ಮಾಡುತ್ತಿದ್ದಲ್ಲಿ ಜಾನುವಾರು ಸಂಖ್ಯೆ, ಕಳುಹಿಸಿದವರು ಮತ್ತು ಪಡೆಯುವವರ ಹೆಸರು, ವಿಳಾಸ, ದೂರವಾಣಿ ಸಂಖ್ಯೆಯನ್ನು ದೊಡ್ಡ ಅಕ್ಷರಗಳಲ್ಲಿ ವಾಹನದ ಮೇಲೆ ಬರೆಯುವುದು ಹಾಗೂ ಜಾನು ವಾರುಗಳ ಮಾಲೀಕರು ಮಾಲೀಕತ್ವದ ದಾಖಲೆಗಳನ್ನು ಸಕ್ಷಮ ಪ್ರಾಧಿಕಾರದಿಂದ ಪರವಾನಗಿ ಪಡೆಯುವುದು ಕಡ್ಡಾಯವಾಗಿದೆ ಎಂದರು. ಚೆಕ್ ಪೋಸ್ಟಗಳಲ್ಲಿ ಪಶುವೈದ್ಯಾಧಿಕಾರಿಗಳನ್ನು ಸಹ ನಿಯೋಜಿಸಬೇಕು ಎಂದು ಹೇಳಿದರು.

ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಅನಧೀಕೃತ ಜಾನುವಾರುಗಳ ಸಾಗಾಟದ ಮೇಲೆ ನಿಗಾವಹಿಸಲು ಪಶು ಇಲಾಖೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳ ಸಹಯೋಗದಲ್ಲಿ ತಂಡಗಳನ್ನು ರಚಿಸಿ ಕ್ರಮ ವಹಿಸಲಾಗುತ್ತಿದೆ. ಜಿಲ್ಲೆಯಲ್ಲಿ 16 ಕಡೆಗಳಲ್ಲಿ ಚೆಕ್‌ಪೋಸ್ಟ್ ಮಾಡಲಾಗುತ್ತದೆ. ಕೊಪ್ಪಳ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಹಿರೇಸಿಂದೋಗಿ ರಸ್ತೆಯ ಶ್ರೀಶೈಲ ನಗರ ಕ್ರಾಸ್ ಹತ್ತಿರ, ಹೊಸಪೇಟೆ ರಸ್ತೆ ಎಸ್.ಎಫ್.ಎಸ್ ಶಾಲೆ ಹತ್ತಿರ, ಗದಗ ರಸ್ತೆಯ ಜಿಲ್ಲಾ ಕ್ರಿಡಾಂಗಣದ ಹತ್ತಿರ ಹಾಗೂ ಕಿನ್ನಾಳ ರಸ್ತೆಯ ಭಾಗ್ಯನಗರ ಕ್ರಾಸ್ ಬಳಿ ಚೆಕ್‌ಪೋಸ್ಟ್ ತೆರೆಯಲಾ ಗುವುದು. ಅದೇ ರೀತಿ ಮುನಿರಾ ಬಾದ ಪೊಲೀಸ್ ಠಾಣೆ ವ್ಯಾಪ್ತಿಯ ಎನ್-ಹೆಚ್-50ರಲ್ಲಿ ಬರುವ ಹೊಸಲಿಂಗಾಪುರ-ಹುಲಗಿ ಕ್ರಾಸ್ ಹತ್ತಿರ, ಅಳವಂಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಮುಂಡರಗಿ ರಸ್ತೆಯ ಬೆಳಗಟ್ಟಿಯಲ್ಲಿ, ಯಲ ಬುರ್ಗಾ ಪೊಲೀಸ್ ಠಾಣೆ ವ್ಯಾಪ್ತಿ ಯ ಗಜೇಂದ್ರಗಡ ರಸ್ತೆಯಲ್ಲಿನ ಬಂಡಿ ಗ್ರಾಮದಲ್ಲಿ ಹಾಗೂ ಗದಗ ರಸ್ತೆಯ ಸಂಕನೂರು ಕ್ರಾಸ್ ಹತ್ತಿರ, ಗಂಗಾವತಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಆನೆಗೊಂದಿ ರಸ್ತೆಯ ತಹಶೀಲ್ ಆಫಿಸ್ ಹತ್ತಿರ ಹಾಗೂ ಕೊಪ್ಪಳ ರಸ್ತೆಯ ವಡ್ಡರಹಟ್ಟಿ ಕ್ಯಾಂಪ್ ರಸ್ತೆಯಲ್ಲಿ, ಕುಕನೂರು ಪೊಲೀಸ್ ಠಾಣೆ ವ್ಯಾಪ್ತಿಯ ಗದಗ ರಸ್ತೆಯ ಬನ್ನಿಕೊಪ್ಪದಲ್ಲಿ, ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ಕಂಪ್ಲಿ ರಸ್ತೆಯಲ್ಲಿನ ಚಿಕ್ಕಜಂತಕಲ್ಲನಲ್ಲಿ ಹಾಗೂ ಹೊಸಪೇಟೆ ರಸ್ತೆಯ ಕಡೇ ಬಾಗಿಲುದಲ್ಲಿ, ಕಾರಟಗಿ ಪೊಲೀಸ್ ಠಾಣೆ ವ್ಯಾಪ್ತಿಯ ಸಿಂಧ ನೂರು ರಸ್ತೆಯ ಚೆನ್ನಳ್ಳಿ ಕ್ರಾಸ್ ಬಳಿ, ಕುಷ್ಟಗಿ ಪೊಲೀಸ್ ಠಾಣೆ ವ್ಯಾಪ್ತಿಯ ಇಳಕಲ್ಲ ರಸ್ತೆಯಲ್ಲಿನ ಕ್ಯಾದಿಗುಪ್ಪಾ ಕ್ರಾಸ್ ಬಳಿ ಮತ್ತು ತಾವರಗೇರಾ ಠಾಣೆ ಅವರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಜಿಲ್ಲೆಯ ವಿವಿಧ ತಾಲ್ಲೂಕಿನ ಪಶುವೈದ್ಯಾಧಿಕಾರಿಗಳು ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಇತರೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಸಚಿವ ಈಶ್ವರ ಬಿ.ಖಂಡ್ರೆ ಅವರ ಬೀದರ ಜಿಲ್ಲಾ ಪ್ರವಾಸ

ಬೀದರ, ಮೇ.23- ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಮೇ.23 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ. ಅವರು ಮೇ.23 ರಂದು ಮಧ್ಯಾಹ್ನ 2ಕ್ಕೆ ಹೈದರಾಬಾದ್ ರಸ್ತೆ ಮೂಲಕ ಬೀದರಗೆ ಪ್ರಯಾಣಿಸಿ ಸಂಜೆ 4.30ಕ್ಕೆ ಬೀದರ ಮಳೆ ಹಾನಿಯ ಪ್ರದೇಶಗಳಿಗೆ ಭೇಟಿ ಮತ್ತು ಪರಿಶೀಲನೆ ನಡೆಸಲಿದ್ದಾರೆ. ಸಂಜೆ 5.30ಕ್ಕೆ ಬೀದರ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಮಳೆ ಹಾನಿ ಹಾಗೂ ಇತರೆ ಪ್ರಮುಖ ವಿಷಯಗಳ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಸಂಜೆ 8ಕ್ಕೆ ಬೀದರ್ ರಸ್ತೆ ಮೂಲಕ ಹೈದರಾಬಾದಗೆ ಪ್ರಯಾಣಿಸಲಿದ್ದಾರೆಂದು ಸಚಿವರಾದ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬ್ರಿಮ್ಸ್‌ನಲ್ಲಿ ವೈದ್ಯರ ಮೇಲೆ ಹಲ್ಲೆ: ಕ್ರಮಕ್ಕೆ ಈಶ್ವರ ಖಂಡ್ರೆ ಸೂಚನೆ

ಬೀದರ, ಮೇ.23- ಬೀದರ್ ಜಿಲ್ಲಾಸ್ಪತ್ರೆ ಬ್ರಿಮ್ಸ್ ನಲ್ಲಿ ನಿನ್ನೆ ತಡರಾತ್ರಿ ಕೆಲವರು ವೈದ್ಯರ ಮೇಲೆ ಹಲ್ಲೆ ಮಾಡಿರುವುದು ಸಮರ್ಥನೀಯವಲ್ಲ ಎಂದಿರುವ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ ಖಂಡ್ರೆ, ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಸೂಚಿಸಿದ್ದಾರೆ. ಯಾರಿಗೂ ಕಾನೂನು ಕೈಗೆ ತೆಗೆದುಕೊಳ್ಳಲು ಅವಕಾಶ ಇರುವುದಿಲ್ಲ. ಇಂತಹ ಪ್ರಕರಣಗಳು ವೈದ್ಯರ ಆತ್ಮಸ್ಥೈರ್ಯವನ್ನೇ ಕುಗ್ಗಿಸುತ್ತವೆ. ಈ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಹಾಗೂ ಜಿಲ್ಲಾಸ್ಪತ್ರೆಗೆ ಹೆಚ್ಚಿನ ಭದ್ರತೆ ನಡಲು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರಿಗೆ ಸೂಚಿಸಿದ್ದಾರೆ.

ಬೀಳಗಿ ಡಿಪೋ ಮ್ಯಾನೇಜರ್‌ಗೆ ನೋಟಿಸ್ ಜಾರಿ

ಪ್ರಯಾಣಿಕರ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳಿ



ಬಾಗಲಕೋಟೆ, ಮೇ 23

ಸಾರ್ವಜನಿಕರಿಗೆ ಅನುಕೂಲವಾ ಗುವ ರೀತಿಯಲ್ಲಿ ಬಸ್ ಸಂಚಾರ ಮಾಡುವದರ ಜೊತೆಗೆ ಸಾರ್ವಜನಿಕರ ದೂರುಗಳಿಗೆ ಗಂಭೀರವಾಗಿ ಪರಿಗಣಿಸಿ, ಸಮಸ್ಯೆ ಇರುವ ಮಾರ್ಗಗಳ ಪರಿಶೀಲನೆ ನಡೆಸಿ ತಕ್ಷಣ ಪರಿಹಾರ ಕಲ್ಪಿಸುವಂತೆ ಬೀಳಗಿ ಶಾಸಕ ಹಾಗೂ ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷ ಜೆ.ಟಿ.ಪಾಟೀಲ ಅಧಿಕಾರಿಗಳಿಗೆ ಸೂಚನೆ ನೀಡಿದರು.


ನವನಗರದ ಎನ್.ಡಬ್ಲ್ಯೂ.ಕೆ.ಎಸ್.ಆರ್.ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿಗಳ ಕಚೇರಿಯಲ್ಲಿ ಶುಕ್ರವಾರ ಬೀಳಗ ಮತಕ್ಷೇತ್ರದ ಪ್ರಯಾಣಿಕರ ಸಮಸ್ಯೆಗಳ ಕುರಿತು ಅಧಿಕಾರಿಗಳೊಂದಿಗೆ ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಬಸ್ ಸೌಲಭ್ಯಗಳ ಕೊರತೆಯಿಂದ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚೆ ನಡೆಸಿದರು. ವಿಶೇಷವಾಗಿ ಶಾಲಾ- ಕಾಲೇಜು ವಿದ್ಯಾರ್ಥಿಗಳಿಗೆ ಸೂಕ್ತ ಸಮಯದಲ್ಲಿ ಬಸ್ ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಾರ್ವಜನಿಕರಿಂದ ಬಂದ ದೂರುಗಳಿಗೆ ಗಂಭೀರವಾಗಿ ಪರಿಗಣಿಸಿ ಸಮಸ್ಯೆ ಇರುವ ಮಾರ್ಗಗಳ ಪರಿಶೀಲನೆ ನಡೆಸಿ, ಬಸ್ ನಿಲುಗಡೆ ಸೇರಿದಂತೆ ನಾಮಫಲಕ ಅಳವಡಿಕೆಗೆ ತಕ್ಷಣ ಕ್ರಮಕೈಗೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಈಗಾಗಲೇ ಕಗಲಗೊಂಬ, ಹೂಲಗೇರಿ, ಕೆರೂರ ಮಾರ್ಗದಲ್ಲಿ 2 ಸರತಿ, ಸೀಮಿಕೇರಿ ಬೈಪಾಸ್ ಕ್ರಾಸ್‌ನಲ್ಲಿ ನಿಲುಗಡೆ, ಹಳೆ ಅನಗವಾಡಿ ಕ್ರಾಸ್, ದೇವನಾಳ ಪುನರ್ವಸತಿ ಕೇಂದ್ರ, ಗುಳಬಾಳ ಪು.ಕೇ ಶಾಲೆಗೆ ಬಸ್ ನಿಲುಗಡೆ, ಅಮಲಝರಿ ಗ್ರಾಮದಲ್ಲಿರುವ ಇಂದಿರಾ ಪ್ಲಾಟಗೆ ಬೋರ್ಡ ಹಾಗೂ ಬಾಗಲಕೋಟೆ -ಅರಕೇರಿ ತಾಂಡಾ ವಸ್ತಿ ಸಾರಿಗೆ ಪುನಃ ಪ್ರಾರಂಭಿಸುವ ಕುರಿತು ತಿಳಿಸಲಾಗಿತ್ತು. ಆದರೆ ಸರಿಯಾದ ಕ್ರಮ ಆಗದೇ ಇರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಶಾಸಕರು ಸಾರ್ವಜನಿಕರ ಸೂಕ್ತ ಪ್ರಯಾಣಕ್ಕೆ ಕ್ರಮಕೈಗೊಳ್ಳಲು ತಿಳಿಸಿದರು.

ಬೇರೆ ರಾಜ್ಯಗಳಿಗೆ ತೆರಲುವ ಕೆಲವೊಂದು ಬಸ್‌ಗಳನ್ನು ಸ್ಥಳೀಯವಾಗಿ ಸಂಚರಿಸಲು ಕ್ರಮಕೈಗೊಳ್ಳಲು ತಿಳಿಸಿದ ಶಾಸಕರು ಹೆಚ್ಚುವರಿ 10 ಬಸ್‌ಗಳನ್ನು ಬೀಳಗಿ ಘಟಕಕ್ಕೆ ನೀಡುವಂತೆ ತಿಳಿಸಿದರು. ಅಲ್ಲದೇ ಬೀಳಗಿಯಿಂದ ಹುಬ್ಬಳ್ಳಿ ಹಾಗೂ ಬೆಳಗಾವಿಗೆ ಪ್ರತ್ಯೇಕ ಬಸ್‌ನ್ನು ಹೊಸದಾಗಿ ಪ್ರಾರಂಭಿಸಲು ತಿಳಿಸಿದರು. ಬೀಳಗಿ, ಬಾಗಲಕೋಟೆ ಹಾಗೂ ಬಾದಾಮಿ ಡಿಪೋಗಳಲ್ಲಿನ ಪ್ರತಿ ರೂಟಗಳ ಮಾಹಿತಿಯನ್ನು ನೀಡುವಂತೆ ತಿಳಿಸಿದರು. ದೂರುಗಳಿಗೆ ತಕ್ಷಣ ಸ್ಪಂಧನೆ ನೀಡಲು ಆಡಳಿತಕ್ಕೆ ಚುರುಕು ನೀಡುವಂತೆ ತಿಳಿಸಿದರು. ಅಲ್ಲದೇ ಸಾರ್ವಜನಿಕರು ಕೊಟ್ಟ ದೂರಿನನ್ವಯ ಬಸ್‌ಗಳು ಸಂಚರಿಸಿದಾಗ ಸದರ ಸದುಪಯೋಗವಾದರೆ ಮಾತ್ರ ಚಾಲನೆಯಲ್ಲಿಡಲು ತಿಳಿ ಸಿದರು. ಸಭೆಗೆ ಆಗಮಿಸಿದ ಸಾರ್ವಜನಿಕರು ತಮ್ಮ ಕುಂದುಕೊರತೆಗಳ ಬಗ್ಗೆ ಸಭೆಯ ಮುಂದಿಟ್ಟರು. ಪ್ರತಿಯೊಂದ ದೂರುಗಳಿಗೆ ಸೂಕ್ತ ಕ್ರಮಕೈಗೊಂಡು ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಬಸ್ ಸಂಚರಿಸುವಂತೆ ಮಾಡಲು ತಿಳಿಸಿದರು. ಈ ಸಂದರ್ಭದಲ್ಲಿ ಸಾರ್ವಜನಿಕರು ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ನೀಡುವದರ ಜೊತೆಗೆ ಬೇಜವಾಬ್ದಾರಿತನ ತೋರಿದ ಬೀಳಗಿ ಘಟಕ ವ್ಯವಸ್ಥಾಪಕ ಆರ್.ಸಿ. ಖೇಡರ ಅವರಿಗೆ ನೋಟಿಸ್ ಜಾರಿ ಮಾಡಿ ಶಿಸ್ತುಕ್ರಮ ಕೈಗೊಳ್ಳುವಂತೆ ವಿಭಾಗೀಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಎನ್.ಟಿ.ಪಾಟೀಲ, ಜಿಲ್ಲಾ ಸಂಚಾರಿ ಅಧಿಕಾರಿ ಕೆ.ಕೆ.ಲಮಾಣಿ. ಘಟಕ ವ್ಯವಸ್ಥಾಪಕರಾದ ಕೃಷ್ಣಾ ಚವ್ಹಾಣ, ಎ.ಎ.ಕೋರಿ ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು.

ಗಂಗಾವತಿ ಭತ್ತದ ನಾಡು ಜೊತೆಗೆ ಧರ್ಮದ ನೆಲವೀಡು



ಗಂಗಾವತಿ,ಮೇ.23-

ತುಂಗಭದ್ರಾ ನದಿಯ ಕೃಪೆಯಿಂದ 'ಭತ್ತದ ನಾಡು' ಎಂದು ಹೆಸರಾದ ಹಾಗೂ ಶ್ರೀರಾಮನ ಬಂಟ ಶ್ರೀ ಆಂಜನೇಯನ ಜನ್ಮಸ್ಥಳವಾದ ಕಿಷ್ಕಿಂಧಾ ಪ್ರದೇಶದ ಮಹಿಮೆಯಿಂದ ಗಂಗಾವತಿಯು ಧರ್ಮದ ನೆಲೆಬೀಡಾಗಿ ಕಂಗೊಳಿಸುತ್ತಿದೆ ಎಂದು ಶ್ರೀಮದ್ ಕಣ್ವ ಮಠಾಧೀಶರಾದ ವಿದ್ಯಾ ಕಣ್ವ ವಿರಾಜತೀರ್ಥ ಮಹಾ ಸ್ವಾಮಿಗಳು ಹೇಳಿದರು.

ಧರ್ಮ ಜಾಗೃತಿಗಾಗಿ ಕಮಲಾಪುರಕ್ಕೆ ಆಗಮಿಸಿ, ಅಲ್ಲಿಂದ ಹುಣಸಿಹೊಳೆ ಕಣ್ವ ಪೀಠಕ್ಕೆ ತೆರಳುವ ಮಾರ್ಗ ಮಧ್ಯದಲ್ಲಿ ಗಂಗಾವತಿಯ ಶ್ರೀ ಯೋಗೇಶ್ವರ ಯಾಜ್ಞವಲ್ಕ್ಯ ಮಂದಿ ರಕ್ಕೆ ಭೇಟಿ ನೀಡಿದ್ದ ಪೂಜ್ಯರು ಭಕ್ತ ರನ್ನು ಆಶೀರ್ವದಿಸಿ ಮಾತನಾಡಿ ದರು. ಧರ್ಮ, ಧಾರ್ಮಿಕ ಆಚರಣೆ ಹಾಗೂ ಸಂಸ್ಕಾರಗಳನ್ನು ಉಳಿಸಿ ಬೆಳೆಸುವಲ್ಲಿ ಗಂಗಾವತಿಯ ಸೇವಾ ಸಮಿತಿಯವರು ಶ್ರಮಿಸುತ್ತಿರುವುದನ್ನು ಅವರು ಮುಕ್ತಕಂಠದಿಂದ ಪ್ರಶಂಸಿದರು. ಅಧಿಕಮಾಸದ ಪ್ರಯುಕ್ತ 33 ದಿನಗಳ ಕಾಲ ರಾಜ್ಯದ ನಾನಾ ಭಾಗಗಳ ವಿದ್ವಾಂಸರನ್ನು ಆಹ್ವಾನಿಸಿ, 'ಜ್ಞಾನಸತ್ರ'ದ ಅಡಿಯಲ್ಲಿ ಪ್ರವಚನಗಳನ್ನು ಹಮ್ಮಿಕೊಂಡಿರು ವುದು ಇಲ್ಲಿನ ಭಕ್ತರ ಧಾರ್ಮಿಕ ಮನೋಭಾವನೆಗೆ ಸಾಕ್ಷಿಯಾಗಿದೆ ಎಂದರು.

ಇದೇ ಹಿನ್ನೆಲೆಯಲ್ಲಿ ತಾವು ಜೂನ್ 13 ರಿಂದ 15 ರವರೆಗೆ ಮೂರು ದಿನಗಳ ಕಾಲ ಇಲ್ಲಿಯೇ ವಾಸ್ತವ್ಯ ಮಾಡಲಿದ್ದು, ತೊಟ್ಟಿಲು ಪೂಜೆ, ಪುರುಷೋತ್ತಮ ಯಾಗ, ತಪ್ತಮುದ್ರಾ ಧಾರಣೆ ಹಾಗೂ ಪಾದಪೂಜೆಯಂತಹ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳುವುದಾಗಿ ಶ್ರೀಗಳು ತಿಳಿಸಿದರು.

ಇದಕ್ಕೂ ಮುನ್ನ ಮಂದಿರಕ್ಕೆ ಆಗಮಿಸಿದ ಪೂಜ್ಯರನ್ನು ಸೇವಾ ಸಮಿತಿಯ ಅಧ್ಯಕ್ಷರಾದ ಮುರಳಿಧರ್ ಗಂಗನಾಳ, ಪವನ್ ಜೋಶಿ, ರಾಘವೇಂದ್ರ ಮೇಗೂರು, ಸತೀಶ್, ಶೇಷಗಿರಿ ಕುಲಕರ್ಣಿ, ಗುರುರಾಜ ಚರ್ಚಿನಗುಡ್ಡ, ಆನಂದ್, ಮಣಿ, ಶ್ರೀನಿವಾಸ್ ಕುಲಕರ್ಣಿ, ರಾಮಕೃಷ್ಣ ಆಚಾರ, ತಿರುಮಲರಾವ್ ಆಲಂಪಲ್ಲಿ, ರಾಘವೇಂದ್ರ ಲೆಕ್ಕಿಹಾಳ, ರಂಗನಾಥ್ ವಟಗಲ್, ಪ್ರಹ್ಲಾದ್ ಕೋಮಲಾಪುರ ಸೇರಿದಂತೆ ಅಪಾರ ಭಕ್ತಾದಿಗಳು ಪೂರ್ಣಕುಂಭದೊಂದಿಗೆ ಭಕ್ತಿಯಿಂದ ಸ್ವಾಗತಿಸಿದರು.

ಕೊಪ್ಪಳ : ಸ್ಕ್ಯಾನಿಂಗ್ ಸೆಂಟರ್‌ಗಳ ಕಟ್ಟುನಿಟ್ಟಿನ ತಪಾಸಣೆಗೆ ನಿರ್ಣಯ



ಕೊಪ್ಪಳ,ಮೇ.23-

ಲಿಂಗ ಆಯ್ಕೆ ತಡೆ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನ ಮತ್ತು ಸ್ಕ್ಯಾನಿಂಗ್ ಸೆಂಟರ್‌ಗಳ ಮೇಲ್ವಿಚಾರಣೆಯನ್ನು ಬಲಪಡಿಸುವ ಉದ್ದೇಶದಿಂದ ರಚನೆಯಾದ ಜಿಲ್ಲಾ ತಪಾಸಣಾ ಮತ್ತು ಮೇಲ್ವಿಚಾರಣಾ ಸಮಿತಿ (ಪಿಸಿ ಅಂಡ್ ಪಿಎನ್‌ಡಿಟಿ) ಕಾರ್ಯಕ್ರಮದ ಜಿಲ್ಲಾ ಸಲಹಾ ಸಮಿತಿ ಸಭೆಯು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಡಾ.ಲಿಂಗರಾಜು ಟಿ ಅವರ ಅಧ್ಯಕ್ಷತೆಯಲ್ಲಿ ಮೇ 22ರಂದು ನಡೆಯಿತು.

ಜಿಲ್ಲಾಡಳಿತದ ಭವನದಲ್ಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಸ್ಕ್ಯಾನಿಂಗ್ ಸೆಂಟರ್‌ಗಳ ಮೇಲ್ವಿಚಾರಣೆಯನ್ನು ಮನ್ನಷ್ಟು ಪರಿಣಾಮಕಾರಿಯಾಗಿಸುವ ನಿಟ್ಟಿನಲ್ಲಿ ಸಮಿತಿಯ ಸದಸ್ಯರು ತಮ್ಮ ಕರ್ತವ್ಯದ ನಡುವೆಯೂ ಜಂಟಿ ತಪಾಸಣೆಗೆ ಅಗತ್ಯ ಸಮಯ ಮೀಸ ಲಿಡಬೇಕೆಂದು ಸಭೆಯಲ್ಲಿ ಒಮ್ಮತದ ನಿರ್ಧಾರ ಕೈಗೊಳ್ಳಲಾಯಿತು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಲಿಂಗರಾಜು ಟಿ. ಅವರು ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಮೊದಲ ತ್ರೈಮಾಸಿಕದ ಅವಧಿ ಏಪ್ರಿಲ್‌ನಿಂದ ಇದುವರೆಗೆ ಜಿಲ್ಲೆಯಾದ್ಯಂತ ಈಗಾಗಲೇ 34 ಸ್ಕ್ಯಾನಿಂಗ್ ಕೇಂದ್ರಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಲಾಗಿದೆ. ಪ್ರಸ್ತುತ ತಪಾಸಣಾ ಪ್ರಗತಿ ಶೇ.100 ರಷ್ಟಿದ್ದು, ಉಳಿದ ಕೇಂದ್ರಗಳಿಗೂ ಭೇಟಿ ನೀಡಿ ಪರಿಶೀಲನೆ ಪೂರ್ಣ ಗೊಳಿಸಬೇಕು ಎಂದು ತಿಳಿಸಿದರು.

ಸ್ಕ್ಯಾನಿಂಗ್ ಸೆಂಟರಗಳಿಗೆ ನಿಯಮಿತ ತಪಾಸಣೆ, ಪಾರದರ್ಶಕತೆ ಮತ್ತು ಕಾಯ್ದೆಯ ಸಮರ್ಪಕ ಅನುಷ್ಠಾನದ ಕುರಿತು ಸಭೆಯಲ್ಲಿ ಸದಸ್ಯರು ನಾನಾ ಸಲಹೆಗಳನ್ನು ನೀಡಿದರು. ಜಿಲ್ಲೆಯಲ್ಲಿ ಪ್ರಸ್ತುತ 60 ಸ್ಕ್ಯಾನಿಂಗ್ ಸೆಂಟರ್‌ಗಳನ್ನು ಕಾರ್ಯ ನಿರ್ವಹಿಸುತ್ತಿವೆ. ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಲಾಗುತ್ತದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಕೆಪಿಎಂಇ ನೋಂದಣಿ ಸಂಖ್ಯೆ ಹೊಂದಿದ ಸ್ಕ್ಯಾನಿಂಗ್ ಸೆಂಟರಗಳನ್ನು ಪಿಸಿ ಅಂಡ್ ಪಿಎನ್‌ಡಿಟಿ ಕಾರ್ಯಕ್ರಮದಡಿಯಲ್ಲಿ ಹೊಸದಾಗಿ ನೋಂದಣಿ ಹಾಗೂ ನವೀಕರಣ ಮಾಡಲು ಬೇಕಾದ ಎಲ್ಲಾ ದಾಖಲಾ ತಿಗಳೊಂದಿಗೆ ಮನವಿ ಸಲ್ಲಿಸಿದ ಕೊಪ್ಪಳದ ಶ್ರೀ ಜಗದ್ಗುರು ಗವಿಸಿದ್ದೇಶ್ವರ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಪೋಸ್ಟ್ ಗ್ರ್ಯಾಜುಯೇಟ್ ಸ್ಟಡೀಸ್ ಅಂಡ್ ರಿಸರ್ಚ್ ಸೆಂಟರ್, ಗಂಗಾವತಿಯ ಬಂಬೂ ಬಜಾರ್ ದಲ್ಲಿನ ಚೈತನ್ಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಗಂಗಾವತಿಯ ಕಂಪ್ಲಿ ರೋಡನಲ್ಲಿರುವ ಮಲ್ಲಿಕಾರ್ಜುನ ಮಲ್ಟಿಸ್ಪೆಷಾಲಿಟಿ ಹಾಸ್ಪಿಟಲ್, ಕೊಪ್ಪಳ ಸಿಟಿಯ ಹೊಸಪೇಟೆ ರಸ್ತೆಯಲ್ಲಿನ ಶಿವಶಾಂತ ಕಾಲೋನಿಯ ನವಜೀವನ ಹಾಸ್ಪಿಟಲ್, ಗಂಗಾವತಿಯ ರಾಯಚೂರು ರಸ್ತೆಯಲ್ಲಿರುವ ಸಿದ್ದೇಶ್ವರ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಇವರ ದಾಖಲಾತಿಗಳನ್ನು ಸಭೆಯಲ್ಲಿ ಪರಿಶೀಲಿಸಿ ಈ ಸ್ಕ್ಯಾನಿಂಗ್ ಸೆಂಟರಗಳ ಪಿಸಿ ಪಿಎನ್‌ಡಿಟಿ ಪರವಾನಿಗೆಯನ್ನು ಪಿಸಿ ಪಿಎನ್‌ಡಿಟಿ ಕಾರ್ಯಕ್ರಮ ದಡಿಯಲ್ಲಿ ಹೊಸದಾಗಿ ನೋಂದಣಿ ಮಾಡಲು ಸಭೆಯಲ್ಲಿ ಸರ್ವಾನುಮತ ದಿಂದ ತೀರ್ಮಾನಿಸಲಾಯಿತು. ಕೊಪ್ಪಳದ ದಿವಟರನಗರದಲ್ಲಿನ ಶ್ರೀ ಮಂಗಳ ಹಾಸ್ಪಿಟಲ್ ಅವರ ಮನವಿ ಯನ್ನು ಪರಿಶೀಲಿಸಿ ಈ ಸ್ಕ್ಯಾನಿಂಗ್ ಸೆಂಟರನ ಪಿಸಿ ಪಿಎನ್‌ಡಿಟಿ ಪರವಾ ನಿಗೆಯನ್ನು ಪಿಸಿ ಪಿಎನ್‌ಡಿಟಿ ಕಾರ್ಯಕ್ರಮದಡಿಯಲ್ಲಿ ನವೀಕರಣ ಮಾಡಲು ಸಭೆಯಲ್ಲಿ ನಿರ್ಣಯಿಸ ಲಾಯಿತು.

ಸಭೆಯಲ್ಲಿ ಜಿಲ್ಲಾ ತಪಾಸಣಾ ಮತ್ತು ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರಾದ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ರವೀಂದ್ರನಾಥ್ ಎಂ. ಹೆಚ್., ಸದಸ್ಯ ಕಾರ್ಯದರ್ಶಿ ಕಿಮ್ಸ್ ಆಸ್ಪತ್ರೆಯ ರೇಡಿಯಾಲಜಿಸ್ಟ್ ಡಾ. ದಯಾನಂದ ಸ್ವಾಮಿ, ಪಿಸಿಪಿಎನ್‌ಡಿಟಿ ಕಾರ್ಯಕ್ರಮದ ಸಲಹಾ ಸಮಿತಿಯ ಅಧ್ಯಕ್ಷರು ಹಾಗೂ ಮುನಿರಾಬಾದ್ ಸಮುದಾಯ ಆರೋಗ್ಯ ಕೇಂದ್ರದ ಪ್ರಸೂತಿ ತಜ್ಞರಾದ ಡಾ.ಕೆ.ಎಚ್.ತೊಗರಿ, ಜಿಲ್ಲಾ ಸಲಹಾ ಸಮಿತಿ ಸದಸ್ಯರಾದ ಮಕ್ಕಳ ತಜ್ಞರಾದ ಡಾ.ಗಿರೀಶ್, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ವಕೀಲರಾದ ಶಂಕರ ಬಿಸರಳ್ಳಿ, ರಿಲೀಫ್ ಫೌಂಡೇಶನ್ ಹೆಲ್ತ್ ಸರ್ವಿಸ್ ಕೊಪ್ಪಳದ ಎನ್‌ಜಿಓದ ಡಾ.ವಿಶ್ವನಾಥ ನಲ್ವಾಡ, ಧ್ವನಿ ಸ್ವಯಂ ಸೇವಾ ಸಂಸ್ಥೆಯ ಅಧ್ಯಕ್ಷರಾದ ಶಂಕ್ರಪ್ಪ ಬಿ ಸುರಳ್, ಅಲ್ಫಾ ಹೆಲ್ತ್ ಎಜ್ಯುಕೇಶನ್ ಅಂಡ್ ರೂರಲ್ ಡೆವಲಪಮೆಂಟ್ ಫೌಂಡೇಶನ್ ಕೊಪ್ಪಳದ ಸಲೀಮಾ ಜಾನ್ ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಮತ್ತೆ ಇಂಧನ ದರ ಏರಿಕೆ: 10 ದಿನಗಳಲ್ಲಿ 3 ನೇ ಬಾರಿಗೆ ಹೆಚ್ಚಳ

ತಡೆರಹಿತ ಲಭ್ಯತೆಯನ್ನು ಖಚಿತಪಡಿ ಸಲಾಗಿದ್ದು, ಹೆಚ್ಚುತ್ತಿರುವ ಬೇಡಿಕೆ ಯನ್ನು ಪೂರೈಸಲು ದೇಶೀಯ ಎಲ್‌ಪಿಜಿ ಉತ್ಪಾದನೆಯನ್ನು ಗಮನಾರ್ಹವಾಗಿ ಹೆಚ್ಚಿಸಲಾಗಿದೆ ಎಂದು ಅವರು ತಿಳಿಸಿದ್ದರು. ಆದರೂ ಅನಿವಾರ್ಯವಾಗಿ ಇಂಧನ ಬೆಲೆ ಮೂರನೇ ಬಾರಿಗೆ ಏರಿಕೆ ಯಾಗಿದೆ.

ಜಂಬೂ ಸವಾರಿ ಮಾದರಿಯ ಭವ್ಯ ಮೆರವಣಿಗೆ-ಎ.ಪಾಪಾರೆಡ್ಡಿ

ಆಂಧ್ರ, ಪ್ರದೇಶ, ತಮಿಳುನಾಡು ಸೇರಿದಂತೆ ವಿವಿಧ ರಾಜ್ಯಗಳಿಂದ ಆಗಮಿಸುವ ಕಲಾತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಲಿವೆ. ಶ್ರೀ ಮಾತಾ ಲಕ್ಷ್ಮಮ್ಮ ದೇವಿಯ ಉತ್ಸವ ಮೂರ್ತಿ ಹಾಗೂ ಪಲ್ಲಕ್ಕಿ ಮೆರವಣಿಗೆ ವಿಶೇಷ ಆಕರ್ಷಣೆಯಾಗಲಿದೆ. ವೀರಗಾಸೆ, ಕತ್ತಿ ವರಸೆ, ಡೊಳ್ಳು ಕುಣಿತ, ಗಾಲಿ ಹಲಿಗೆ, ಕರಡಿ ಮಜಲು, ಜಗ್ಗಲಿಗೆ, ನಾದಸ್ವರ ವಾದನ, ನಂದಿಧ್ವಜ ಸೇರಿದಂತೆ ಹಲವು ಗ್ರಾಮೀಣ ಕಲಾರೂಪಗಳು ಮೆರವಣಿಗೆಯಲ್ಲಿ ಮೆರುಗು ತರುವುದಾಗಿ ಹೇಳಿದರು.

ಮೂರು ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಸಂಜೆ 6 ಗಂಟೆಯಿಂದ ಮಾರುತಿ ನಗರ ಗದ್ವಾಲ್ ರಸ್ತೆಯ ವೀರಾಂಜನೇಯ ಕಲ್ಯಾಣ ಮಂಟಪ ಹಾಗೂ ಗಂಜ್ ಕಲ್ಯಾಣ ಮಂಟಪದಲ್ಲಿ ನಡೆಯಲಿವೆ. ರಾಜ್ಯ ಹಾಗೂ ದೇಶದ ವಿವಿಧ ಭಾಗಗಳಿಂದ ಖ್ಯಾತ ಕಲಾವಿದರು ಭಾಗವಹಿಸಲಿದ್ದು, ಕಾಲೇಜು ವಿದ್ಯಾರ್ಥಿಗಳಿಗಾಗಿ ನೃತ್ಯ ಸ್ಪರ್ಧೆಯನ್ನೂ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಮಾಜದ ಕಾರ್ಯಾಧ್ಯಕ್ಷ ವಿ. ಕೃಷ್ಣಮೂರ್ತಿ, ಪ್ರಧಾನ ಕಾರ್ಯದರ್ಶಿ ಜಿ. ಶೇಖರರೆಡ್ಡಿ, ಯುವ ಅಧ್ಯಕ್ಷ ಬಂಗಿ ನರಸರೆಡ್ಡಿ ಸೇರಿದಂತೆ ಸಮಾಜದ ಹಲವು ಮುಖಂಡರು ಉಪಸ್ಥಿತರಿದ್ದರು.

ಬೆಂಗಳೂರುಮುಂಬೈ ಸ್ಲೀಪರ್ ವಂದೇ ಭಾರತ ರೈಲು ಸಂಚಾರ ಖಚಿತ

ರಾಯಚೂರು ಸೇರಿ ಉತ್ತರ ಕರ್ನಾಟಕಕ್ಕೆ ಮಹತ್ವದ ರೈಲು ಸೌಲಭ್ಯ

ಪ್ರಯಾಣ ಅವಧಿ ಉಳಿತಾಯ ಮಾಡಲಿದೆ ಎಂದು ಡಾ. ಬಾಬುರಾವ್ ತಿಳಿಸಿದ್ದಾರೆ. ಕಳೆದ ಮೂರು ದಶಕಗಳಿಂದ ಈ ಭಾಗದ ಜನರ ಬಹುದಿನಗಳ ಬೇಡಿಕೆ ಇದಾಗಿದ್ದು, ಹೊಸ ರೈಲು ಸೇವೆಯಿಂದ ರಾಯಚೂರು, ಕಲಬುರಗಿ ಸೇರಿದಂತೆ ಉತ್ತರ ಕರ್ನಾಟಕ ಭಾಗದ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದ್ದಾರೆ.ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ರಾಜ್ಯ ರೈಲ್ವೆ ಖಾತೆ ಸಚಿವ್ವ. ಖಟಇಾಚ್ಟ್ಚಟ ಅವರಿಗೆ ಈ ರೈಲು ಸೇವೆ ಆರಂಭಿಸುವಂತೆ ನಿರಂತರ ಮನವಿ ಮಾಡಲಾಗುತ್ತಿತ್ತು. ಇದೀಗ ಮನವಿಗೆ ಸ್ಪಂದನೆ ದೊರೆತಿದ್ದು, ಉಭಯ ಸಚಿವರು ಅಭಿನಂದನಾರ್ಹರು ಎಂದು ಡಾ. ಬಾಬುರಾವ್ ತಿಳಿಸಿದ್ದಾರೆ.

ಕನ್ನಡ ಹೋರಾಟಗಾರರ ಮೇಲಿನ ಎಲ್ಲ ಪ್ರಕರಣ ಹಿಂಪಡೆಯಲಿ ಸರ್ಕಾರ ಮಾತಿನಂತೆ ನಡೆಯಬೇಕು: ವಿನೋದರೆಡ್ಡಿ ಎಂ. ಆಗ್ರಹ

ಸರಿಯುವುದಿಲ್ಲ'' ಎಂದು ಎಚ್ಚರಿಸಿದರು.

ರಾಜ್ಯ ಸರ್ಕಾರ ಸಚಿವ ಸಂಪುಟದಲ್ಲಿ ಚರ್ಚಿಸಿದಂತೆ ಕನ್ನಡಪರ ಮತ್ತು ರೈತಪರ ಹೋರಾಟಗಾರರ ಮೇಲಿನ ಎಲ್ಲಾ ಮೊಕದ್ದಮೆಗಳನ್ನು ಸಂಪೂರ್ಣವಾಗಿ ಹಿಂಪಡೆಯುವ ಮೂಲಕ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು ಎಂದು ವಿನೋದರೆಡ್ಡಿ ಎಂ. ಆಗ್ರಹಿಸಿದರು.

ಶಿಕ್ಷಕರ ನೇಮಕಾತಿಗೆ ಆಗ್ರಹಿಸಿ ಮೇ 25ರಂದು ಬೃಹತ್ ಪ್ರತಿಭಟನೆ

ಭರವಸೆ ನೀಡಿತ್ತು. ಆದರೆ ಮೂರು ವರ್ಷಗಳಾದರೂ ಯಾವುದೇ ಪ್ರಮುಖ ನೇಮಕಾತಿ ಪ್ರಕ್ರಿಯೆ ಆರಂಭವಾಗಿಲ್ಲ. ಶಿಕ್ಷಣ ಸಚಿವರು ಪದೇ ಪದೇ ನೇಮಕಾತಿ ಬಗ್ಗೆ ಹೇಳಿಕೆ ನೀಡುತ್ತಿದ್ದು, ಇನ್ನೂ ಅಧಿಸೂಚನೆ ಹೊರಡಿಸಿಲ್ಲ ಎಂದು ಟೀಕಿಸಿದರು.

ದೈಹಿಕ ಶಿಕ್ಷಣ, ಚಿತ್ರಕಲಾ, ಸಂಗೀತ ಹಾಗೂ ರಂಗಕಲಾ ಶಿಕ್ಷಕರ ನೇಮಕಾತಿ ಕುರಿತ ಭರವಸೆಗಳೂ ಈಡೇರಿಲ್ಲ. ಕೆಪಿಎಸ್-ಮ್ಯಾಗ್ನೆಟ್ ಯೋಜನೆಯ ಮೂಲಕ ಶಾಲೆಗಳನ್ನು ವಿಲೀನಗೊಳಿಸಿ ಶಿಕ್ಷಕರ ಹುದ್ದೆಗಳನ್ನು ಕಡಿತಗೊಳಿಸಲಾಗುತ್ತಿದೆ ಎಂದು ಆರೋಪಿಸಿದರು.

ಶಿಕ್ಷಕರ ಅರ್ಹತಾ ಪರೀಕ್ಷೆ ()ಯನ್ನು ವರ್ಷಕ್ಕೆ ಎರಡು ಬಾರಿ ನಡೆಸಬೇಕು. ಖಾಯಂ ಶಿಕ್ಷಕರ ನೇಮಕಾತಿ ವಿಳಂಬ ಮಾಡದೇ ತಕ್ಷಣ , ಹಾಗೂ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಬೇಕು ಎಂದು ಆಗ್ರಹಿಸಿದರು.

ಈ ಹಿನ್ನೆಲೆಯಲ್ಲಿ ಮೇ 25ರಂದು ಬೆಳಿಗ್ಗೆ 10.30ಕ್ಕೆ ರಾಯಚೂರು ನಗರದ ಅಂಬೇಡ್ಕರ್ ವೃತ್ತದಲ್ಲಿ ಶಿಕ್ಷಕ ಉದ್ಯೋಗಾಕಾಂಕ್ಷಿಗಳ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಭೀಮರೆಡ್ಡಿ, ಹನುಮಂತ ಕಲ್ಲೂರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಾಲುಗುಂದಲ್ಲಿ ಗ್ಯಾಸ್ ಏಜೆನ್ಸಿಯಿಂದ ಬ್ಲಾಕ್ ಮಾರಾಟ: ಗ್ರಾಮಸ್ಥರ ಪ್ರತಿಭಟನೆ

ಮಾಲೀಕರು ಕಾನೂನು ಗಾಳಿಗೆ ತೂರಿ ನಾವು ಮಾಡಿದ್ದ ಶಾಸನ ಎಂದು ಹೇಳುತ್ತಾರೆ. ಗ್ಯಾಸ್ ಬಂದರೆ ತೆಗೆದುಕೊಂಡು ಹೋಗಿ ಇಲ್ಲಾಂದ್ರೆ ಬಿಡಿ ನಾವು ಏನು ಮಾಡಬೇಕು ಎಂದು ಹೇಳುತ್ತಾರೆ ಅವರು ಸಿಬ್ಬಂದಿ ವರ್ಗದವರು. ಸಾರ್ವಜನಿಕರಿಗೆ ಬೆಲೆ ಇಲ್ಲದಂತಾಗಿದೆ.

ಇಲ್ಲಿಯಾರು ಹೇಳೋರು ಕೇಳೋರು ಇಲ್ಲದಂತಾಗಿದೆ. ಎಂದು ಗ್ಯಾಸ್ ಸಿಲಿಂಡರ್ ಗ್ರಾಹಕರು ಮಾಲೀಕರು ಮೇಲೆ ಆಕ್ರೋಶವನ್ನು ವ್ಯಕ್ತಪಡಿಸಿದರು.

ತಾಲೂಕು ತಹಶೀಲ್ದಾರ್ ಅರುಣ್ ಕುಮಾರ್ ಎಚ ದೇಸಾಯಿ ಅವರ ಫೋನ್ ಮಾಡಿದರೆ. ಅವರು ಫುಡ ಆಫೀಸರ್ ಗೆ ಮಾನ ಮಾಡುತ್ತೇನೆ ಎಂದು ಪತ್ರಿಕೆಯೊಂದಿಗೆ ಮಾತನಾಡುತ್ತಾನೆ ಎಂದು ಜಾರಿಕೊಂಡರು ಆದರೆ ಸಾರ್ವಜನಿಕರು ಬಿಸಿಲಿನ ಝಳದಿಂದ ಬೇಸ್ತು ಹೋಗಿದ್ದಾರೆ.

ಇದುವರೆಗೂ ಸಂಬಂಧಿಸಿದ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿರುವುದನ್ನು ನೋಡಿದರೆ ಜನರಿಗೆ ಸಾವಿಗೆ ಕಾರಣವಾಗಬಹುದು ಎಂದು ಅಲ್ಲಿನ ಸಾರ್ವಜನಿಕರು ಆಗ್ರಹಿಸಿದರು.

ಶಸ್ತ್ರ ಚಿಕಿತ್ಸೆ ಇಲ್ಲದೆ ಅನ್ನನಾಳದಲ್ಲಿನ ಕೋಳಿ ಮಾಂಸದ ಎಲುಬು ತೆಗೆದ:ಡಾ.ರಾಹುಲ್ ನಾಯ್ಕೋಡಿ

ಗಂಟಲಿನ ಕೆಳಭಾಗದ ಸೂಕ್ಷ್ಮವಾದ ಅನ್ನನಾಳದಲ್ಲಿ ಸಿಲುಕಿಕೊಂಡು ಆತನಿಗೆ ಉಸಿರಾಟದ ತೊಂದರೆ ಕಾಣಿಸಿಕೊಂಡು ಅವರ ಆರೋಗ್ಯದಲ್ಲಿ ಏರುಪೇರಾಗಿತ್ತು ತಕ್ಷಣ ನಮ್ಮ ವೈದ್ಯರ ತಂಡ ಸಕಾಲದಲ್ಲಿ ಇಸೋಪಾಗೂಸ್ಕೋಪಿ ಮೂಲಕ ಎಲುಬು ಹೊರ ತೆಗೆಯಲಾಯಿತು ಎಂದು ಅವರು ತಿಳಿಸಿದರು.ಈ ಚಿಕಿತ್ಸೆ ಕಾರ್ಯದಲ್ಲಿ ಡಾ.ರಾಹುಲ್ ಎಸ್.ನಾಯ್ಕೋಡಿ,ಅರವಳಿಕೆ ತಜ್ಞ ಡಾ.ಚೇತನ್ ಜೆವುರ,ಡಾ.ರಾಜೇಶ್ವರಿ ಆರ್. ನಾಯ್ಕೋಡಿ ಹಾಗೂ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಇದ್ದರು

ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಯಶಸ್ಸಿಗೆ ಅಧಿಕಾರಿಗಳು ಸಮರ್ಪಣಾ ಭಾವದಿಂದ ಕೆಲಸ ಮಾಡಿ: ಡಾ. ಶರಣಬಸಪ್ಪ ಗಣಜಲಖೇಡ



ವಿಜಯನಗರ,ಮೇ.23-

ಸರ್ಕಾರದಿಂದ ಜಾರಿಯಾಗುತ್ತಿರುವ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು ಸಾರ್ವಜನಿಕರಿಗೆ ಸಮರ್ಪಕವಾಗಿ ತಲುಪಬೇಕು. ಈ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಆರೋಗ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸಮರ್ಪಣಾ ಭಾವದಿಂದ ಕೆಲಸ ಮಾಡಬೇಕು ಎಂದು ಕಲ್ಬುರ್ಗಿ ವಿಭಾಗೀಯ ಸಹ ನಿರ್ದೇಶಕರ ಕಚೇರಿಯ ಉಪನಿರ್ದೇಶಕರಾದ ಡಾ. ಶರಣಬಸಪ್ಪ ಗಣಜಲಖೇಡ ಅವರು ಸೂಚಿಸಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಯಿ-ಮಗು ಆರೋಗ್ಯಕ್ಕೆ ಮೊದಲ ಆದ್ಯತೆ: ಚಿಕಿತ್ಸೆ ಅರಸಿ ಬರುವ ಗರ್ಭಿಣಿಯರು ಮತ್ತು ಬಾಣಂತಿಯರ ಆರೈಕೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಜಿಲ್ಲೆಯಲ್ಲಿ ತಾಯಿ ಮರಣ ಹಾಗೂ ಶಿಶು ಮರಣ ಪ್ರಮಾಣವನ್ನು ಗಣನೀಯವಾಗಿ ಸಂಪೂರ್ಣವಾಗಿ ಶೂನ್ಯಕ್ಕೆ ತರುವಲ್ಲಿ ಅಧಿಕಾರಿಗಳು ಶ್ರಮಿಸಬೇಕು. ಮಾಡಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ನೀಡಲಾಗುವ ಲಸಿಕೆಗಳನ್ನು ಕಾಲಕಾಲಕ್ಕೆ ಯಾವುದೇ ಲೋಪವಾಗದಂತೆ ನಿಗದಿತ ಗುರಿ ಸಾಧಿಸಬೇಕು.

ಇನ್ನೇನು ಮಳೆಗಾಲ ಹತ್ತಿರ ಬರುತ್ತಿರುವುದರಿಂದ ಮಲೇರಿಯಾ, ಡೆಂಗು, ಚಿಕನ್ ಗುನ್ಯಾದಂತಹ ಸಾಂಕ್ರಾಮಿಕ ರೋಗಗಳು ಹರಡದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ಸದಾ ಸನ್ನದ್ಧವಾಗಿರಬೇಕು.

ತುರ್ತು ಚಿಕಿತ್ಸೆ ಗೆ ಔಷಧಗಳ ಕೊರತೆಯಾಗದಂತೆ ಅಧಿಕಾರಿಗಳು ನಿರಂತರ ನಿಗಾವಹಿ ಸಬೇಕು. ಸೊಳ್ಳೆಗಳ ನಿಯಂತ್ರಣ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕಾರ್ಯಗಾರ ಆಯೋಜಿಸಬೇಕು ಎಂದ ಅವರು, ಜಿಲ್ಲೆಯ ಎಲ್ಲಾ ತಾಲೂಕು ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನಾಯಿ ಕಡಿತ, ಮತ್ತು ಹಾವು ಕಡಿತಕ್ಕೆ ಅಗತ್ಯವಿರುವ ತುರ್ತು ಚಿಕಿತ್ಸಾ ಲಸಿಕೆಗಳು ಹಾಗೂ ಔಷಧಗಳು ಸದಾ ಲಭ್ಯವಿರುವಂತೆ ನೋಡಿಕೊಳ್ಳಬೇಕು ಎಂದು ಖಡಕ್ ಸೂಚನೆ ನೀಡಿದರು.

ಕ್ಷಯ ಹಾಗೂ ಕುಷ್ಠರೋಗ ಮುಕ್ತ ಜಿಲ್ಲೆಯಾಗಿಸಿ: ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಆರಂಭಿಕ ಹಂತದಲ್ಲೇ ಕ್ಷಯ ರೋಗಿಗಳನ್ನು ಸಕಾಲದಲ್ಲಿ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಬೇಕು. ಇದರೊಂದಿಗೆ ಕುಷ್ಠರೋಗ ನಿರ್ಮೂಲನೆಗೆ ವಿಶೇಷ ಒತ್ತು ನೀಡಬೇಕು ಎಂದು ತಿಳಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಲ್. ಆರ್. ಶಂಕರ ನಾಯ್ಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಸಭೆಯಲ್ಲಿ ಜಿಲ್ಲಾ ಆರ್.ಸಿ.ಎಚ್ ಅಧಿಕಾರಿಗಳಾದ ಡಾ. ಜಂಬಯ್ಯ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಸತೀಶ್ ಚಂದ್ರ, ಜಿಲ್ಲಾ ಸರ್ವೇ ಕ್ಷಣಾಧಿಕಾರಿ ಡಾ. ಷಣ್ಮುಖ, ಶಸ್ತ್ರ ಚಿಕಿತ್ಸ ಕರಾದ ಡಾ. ಹರಿಪ್ರಸಾದ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ. ಪಿ. ದೊಡ್ಡಮನಿ ಸೇರಿ ದಂತೆ ಜಿಲ್ಲಾ ಮಟ್ಟದ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಘನ ತ್ಯಾಜ್ಯ ನಿರ್ವಹಣೆ : ಗಂಗಾವತಿ ನಗರಸಭೆಗೆ ರಾಜ್ಯಮಟ್ಟದ ಪುರಸ್ಕಾರ

ಗಂಗಾವತಿ,ಮೇ.23-

ಕೇಂದ್ರ ಸರ್ಕಾರದ ಘನ ತ್ಯಾಜ್ಯ ನಿರ್ವಹಣೆ ನಿಯಮಾವಳಿಗಳ ಅನ್ವಯ ನಡೆದ ರಾಜ್ಯಮಟ್ಟದ ಮೌಲ್ಯಮಾಪನದಲ್ಲಿ ಗಂಗಾವತಿ ನಗರ ಸಭೆ ಸಾಧನೆಗೆ ರಾಜ್ಯಮಟ್ಟದ ಪುರಸ್ಕಾರ ಪಡೆದಿದೆ. ಈ ಹಿನ್ನಲೆಯಲ್ಲಿ ನಗರಸಭೆಯ ಪೌರಾಯುಕ್ತಾರಾದ ಆರ್ .ವಿರೂಪಾಕ್ಷ ಮೂರ್ತಿ ಅವರನ್ನು ನಗರಸಭೆಯ ಮಾಜಿ ಸದಸ್ಯರುಗಳು ಕಾರ್ಯಲಯದಲ್ಲಿ ಸನ್ಮಾನಿಸಿ ಗೌರವಿಸಿದರು.

ಗಂಗಾವತಿ ನಗರಸಭೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಥಮ ಸ್ಥಾನ ಹಾಗೂ ರಾಜ್ಯಮಟ್ಟದ ಏಳನೇ ಸ್ಥಾನ ಪಡೆದು ಪ್ರಶಂಸೆಗೆ ಪಾತ್ರವಾಗಿದೆ. ವೇಳೆ ಮಾಜಿ ಸದಸ್ಯರುಗಳಾದ ಪರಶುರಾಮ ಮಡ್ಡೇರ್, ಉಮೇಶ್ ಸಿಂಗನಾಳ, ಮುಸ್ತಾಕಲ್ಲಿ ನೀಲಕಂಠ ಕಟ್ಟಿಮನಿ, ವಾಸುದೇವ್ ನವಲಿ, ರಾಚಪ್ಪ ಸಿದ್ದಾಪುರ್, ಅಭಿಷೇಕ್ ಸಿರಿಗೇರಿ ಅಮರೇಗೌಡ, ಶಿವಪ್ಪ ಮಾದಿಗ ಮುಂತಾದವರು ಭಾಗವಹಿಸಿದ್ದರು.

ವಿಶ್ವಕರ್ಮ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಸುರಪುರ,ಮೇ.23-

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಬೆಂಗಳೂರು ವತಿಯಿಂದ ವಿಶ್ವಕರ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ತಾಲೂಕ ಅಧ್ಯಕ್ಷ ದೇವಿಂದ್ರಪ್ಪ ತಳವಾರಗೇರ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿ,ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯಾಧ್ಯಕ್ಷರಾದ ಕೆ.ಪಿ.ನಂಜುಂಡಿ ವಿಶ್ವಕರ್ಮ ಅವರ ಸಾರಥ್ಯದಲ್ಲಿ 2025-26 ನೇ ಸಾಲಿನ ಮತ್ತು ಪರೀಕ್ಷೆಗಳಲ್ಲಿ ಶೇ.75 ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿಶ್ವಕರ್ಮ ಸಮಾಜದ ಪ್ರತಿಭಾವಂತ ವಿದ್ಯಾರ್ಥಿ ಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಇದೇ ಮೇ 31 ರಂದು ಬೆಂಗಳೂರಿನ ಟೌನ್ ಹಾಲ್ ನ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ನಡೆಸಲಾಗುತ್ತಿದೆ. ವಿಶ್ವಕರ್ಮ ಸಮಾಜದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಇದರಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಸಂಬಂಧಪಟ್ಟ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಶಾಲಾ ವರ್ಗಾವಣೆ ಪ್ರಮಾಣ ಪತ್ರ, ಭಾವಚಿತ್ರ,ಖಾಯಂ ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ಈ ಕೆಳಗಿನ ಕೆ.ಸುಂದರ್ ಅವರ ವಾಟ್ಸಾಪ್ ನಂಬರ್ 9886423935 ಗೆ ವಾಟ್ಸಾಪ್ ಮಾಡಬೇಕು ಮತ್ತು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಾಗ ಝುರಾಕ್ಸ್ ಪ್ರತಿಗಳನ್ನು ತರಬೇಕೆಂದು ವಿಶ್ವಕರ್ಮ ಸಮಾಜದ ಬಂಧುಗಳಿಗೆ ಮನವಿ ಮಾಡಿದ್ದಾರೆ.

ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ನಿರ್ಬಂಧಿತ ಪ್ರದೇಶ

ಬಳ್ಳಾರಿ,ಮೇ.23-

ನಗರದ 04 ಪರೀಕ್ಷಾ ಕೇಂದ್ರಗಳಲ್ಲಿ ಮೇ 23 ರಂದು ಮಧ್ಯಾಹ್ನ 02 ರಿಂದ ಸಂಜೆ 05 ಗಂಟೆಯವರೆಗೆ ಡಿಪ್ಲೋಮಾ ಸಿಇಟಿ ಪರೀಕ್ಷೆ ಮತ್ತು ಎಂಇ/ಎಟೆಕ್ ಕೋರ್ಸ್ಗಳ ಪ್ರವೇಶಕ್ಕಾಗಿ ಪಿಜಿಸಿಇಟಿ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀ. ವ್ಯಾಪ್ತಿಯ ಪ್ರದೇಶವನ್ನು ನಿರ್ಭಂದಿತ ಪ್ರದೇಶ ಎಂದು ಜಿಲ್ಲಾ ದಂಡಾಧಿಕಾರಿಯೂ ಆದ ಜಿಲ್ಲಾಧಿ ಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಘೋಷಿಸಿದ್ದಾರೆ.

ಸುಗಮ ಮತ್ತು ಪಾರದರ್ಶಕ ನಿರ್ವಹಣೆಗಾಗಿ, ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಲು ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023 ರ ಕಲಂ 163 ರ ಅಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಈ ಆದೇಶ ಹೊರಡಿಸಿದ್ದಾರೆ.

ಪರೀಕ್ಷಾ ಸಮಯದಲ್ಲಿ ಈ ವ್ಯಾಪ್ತಿಯಲ್ಲಿರುವ ಜೆರಾಕ್ಸ್ ಅಂಗಡಿಗಳು ಮತ್ತು ಇಂಟರ್ನೆಟ್ ಸೆಂಟರ್‌ಗಳನ್ನು ಕಡ್ಡಾಯವಾಗಿ ಮುಚ್ಚುವಂತೆ, ಅನಧಿಕೃತ ವ್ಯಕ್ತಿಗಳು ಮತ್ತು ಗುಂಪುಗಳು ಪರೀಕ್ಷಾ ಕೇಂದ್ರದ ಹತ್ತಿರ ಸುಳಿಯುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಈ ನಿಷೇಧಾಜ್ಞೆಯು ಪರೀಕ್ಷಾ ಕಾರ್ಯದಲ್ಲಿ ತೊಡಗಿರುವ ಸಿಬ್ಬಂದಿ, ಅಧಿಕಾರಿಗಳಿಗೆ ಅನ್ವಯಿಸುವುದಿಲ್ಲ ಎಂದು ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಸಚಿವರ ಆಗಮನಕ್ಕಾಗಿ ಮುಂದೊಡಲಾಗಿದ್ದ ಅಂಬೇಡ್ಕರ್ ಜಯಂತಿಗೆ ಮೆ.25 ರಂದು ಮುಹೂರ್ತ ಫಿಕ್ಸ್! ಜ್ಞಾನ ಪ್ರಕಾಶ ಸ್ವಾಮಿಜೀಗಳ ದರ್ಶನಕ್ಕೆ ಕಾದು ಕುಳಿತ ಬಿಸಿಲು ನಾಡಿನ ನಾಗರಿಕರು

ಅಫಜಲಪುರ:ತಾಲೂಕಿನಲ್ಲಿ ಅಂಬೇಡ್ಕರ್ ಜಯಂತ್ಯೋತ್ಸವ ಆಚರಣೆಗೆ ಸಚಿವರ ಆಗಮನಕ್ಕಾಗಿ ಬಹುದಿನಗಳಿಂದ ಮುಂದೂಡಲಾಗಿದ್ದ ಜಯಂತ್ಯೋತ್ಸವಕ್ಕೆ ಅಧಿಕೃತವಾಗಿ ಮೆ.25 ರಂದು ಕಾರ್ಯಕ್ರಮ ಆಯೋಜನೆಗೆ ನಿಗದಿಯಾಗಿದೆ ಎಂದು ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಶಿವರಾಜ ಬಾದನಳ್ಳಿ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಹಲವು ದಿನಗಳಿಂದ ಹಲವು ಕಾರಣಗಳಿಂದ ಮುಂದೂಡಲಾಗಿದ್ದ ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ್ ಅಂಬೇಡ್ಕರವರ ಜಯಂತ್ಯೋತ್ಸವ ಅಧಿಕೃತವಾಗಿ ಮೆ.25ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ನ್ಯಾಶನಲ್ ಫಂಕ್ಷನ್ ಹಾಲನಲ್ಲಿ ಮಾಡಲು ನಿಶ್ಚಯಿಸಲಾಗಿದೆ.ಈ ಬಾರಿ ಬಹಿರಂಗ ಸಭೆಗೆ ಕಲ್ಯಾಣ ನಾಡಿನ ಖಡಕ್ ರಾಜಕಾರಣಿಗಳು ಹಾಗೂ ಕಲಬುರಗಿ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆರವರು ಆಗಮಿಸಲಿದ್ದಾರೆ. ವಿಶೇಷ ಭಾಷಣಕಾರರಾಗಿ ಜ್ಞಾನಪ್ರಕಾಶ ಸ್ವಾಮಿಗಳು ಆಗಮಿಸಲಿದ್ದು,ಈ ಭಾಗದ ನಡೆದಾಡುವ ದೇವರು ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು, ವೀರಮಹಾಂತ ಶಿವಾಚಾರ್ಯರು,ಉರಿಲಿಂಗ ಪದ್ದಿ ಶ್ರೀಗಳು ಸೇರಿದಂತೆ, ತಾಲೂಕಿನ ಜನಪ್ರಿಯ ಶಾಸಕರಾದ ಎಮ್.ವೈ.ಪಾಟೀಲರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.ಮಾಜಿ ಸಚಿವರಾದ ಮಾಲಿಕಯ್ಯ ಗುತ್ತೇದಾರ ಅವರು ನೇತೃತ್ವ ವಹಿಸಲಿದ್ದು,ಮಾಜಿ ಜಿಲ್ಲಾ ಪಂಚಾಯತ ಸದಸ್ಯರು ಹಾಗೂ ಕೆಕೆಆರಟಿಸಿ ಅಧ್ಯಕ್ಷರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದು,ತಾಲೂಕಿನ ಸಮಸ್ತ ಅಂಬೇಡ್ಕರ್ ಅನುಯಾಯಿಗಳು ಹಾಗೂ ಪ್ರಗತಿಪರ ಚಿಂತಕರು,ಸರ್ವಧರ್ಮಿಯರು ಕಾರ್ಯಕ್ರಮದಲ್ಲಿ ಭಾಗಿಯಾಗಿ ಶೋಭೆ ತರಬೇಕೆಂದು ಮನವಿ ಮಾಡಿದರು.

ನಂತರ ಮಾತನಾಡಿದ ಬಲಗೈ ಸಮುದಾಯದ ತಾಲೂಕು ಗೌರಾವಾಧ್ಯಕ್ಷರಾದ ಭೀಮರಾವ ಗೌರ ಸಮಸ್ತ ತಾಲೂಕಿನ ಜನರು ಕಾತೂರದಿಂದ ಕಾಯುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯೂ ಮೆ.25 ರಂದು ಅದ್ದೂರಿಯಾಗಿ ಅರ್ಥಪೂರ್ಣ ಆಚರಣೆ ಮಾಡಲು ನಿಶ್ಚಯಿಸಲಾಗಿದೆ.ರಾಜ್ಯದ ಹೆಸರಾಂತ ವಾಗ್ಮಿಗಳಾದ ಜ್ಞಾನಪ್ರಕಾಶ ಸ್ವಾಮಿಜೀಗಳು ನಮ್ಮೆಲ್ಲರನ್ನ ಉದ್ದೇಶಿಸಿ ಮಾತನಾಡಲಿದ್ದಾರೆ.ಈ ಬಾರಿ ಬಹಿರಂಗ ಸಭೆಗೆ ತಾಲೂಕಿನ ಧುರೀಣರು,ಪ್ರಗತಿಪರ ಚಿಂತಕರು ಯುವ ಉತ್ಸಾಹಿಗಳು ಹಾಗೂ ಅಂಬೇಡ್ಕರರ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದರು.

ತದನಂತರ ಮಾತನಾಡಿದ ಬಲಗೈ ಸಮುದಾಯದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮೆ.25 ರಂದು ಪಟ್ಟಣದ ನ್ಯಾಶನಲ್ ಫಂಕ್ಷನ್ ಹಾಲನಲ್ಲಿ ಬೆಳಿಗ್ಗೆ11 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರವರ ಜಯಂತ್ಯೋತ್ಸವ ಸಮಿತಿ ಆಯೋಜಿಸಿರುವ ಬಾರಿ ಬಹಿರಂಗ ಸಭೆ ಜರಗುತ್ತದೆ. ಕಾರ್ಯಕ್ರಮದಲ್ಲಿ ತಾಲೂಕು ಜಿಲ್ಲೆ ಸೇರಿದಂತೆ ರಾಜ್ಯದ ಅನೇಕ ರಾಜಕೀಯ ಧುರೀಣರು, ಮಠಾಧೀಶರು ಉಪಸ್ಥಿತರಿರಲಿದ್ದಾರೆ.ಬಹಿರಂಗ ಸಭೆ ಮುಗಿದ ನಂತರ ಪಟ್ಟಣದ ಪ್ರಮುಖ ರಸ್ತೆಗಳ ಮುಖಾಂತರ ಬಾಬಾಸಾಹೇಬರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯುತ್ತದೆ.ಈ ಎಲ್ಲಾ ಕಾರ್ಯಕ್ರಮಗಳಿಗೆ ಅಂಬೇಡ್ಕರರ ಅನುಯಾಯಿಗಳು ಭಾಗಿಯಾಗಿ ಯಶಸ್ವಿಗೊಳಿಸಬೇಕು ಎಂದರು.

ಇದೆ ಸಂದರ್ಭದಲ್ಲಿ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷರಾದ ಶಿವರಾಜ ಹೊಸ್ಮನಿ,ಗೌರಾವಾಧ್ಯಕ್ಷರಾದ ಮಹಾಂತೇಶ ಬಡದಾಳ,ಕಾರ್ಯಾಧ್ಯಕ್ಷರಾದ ಗೌತಮ ಸಕ್ಕರಗಿ,ಬಲಗೈ ಸಮುದಾಯದ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ,ಗೌರಾವಾಧ್ಯಕ್ಷರಾದ ಭೀಮರಾವ ಗೌರ,ಎಸ್.ಸಿ.ಎಸ್.ಟಿ ಬ್ಲಾಕ್ ಅಧ್ಯಕ್ಷರಾದ ಮಹಾಲಿಂಗ ಅಂಗಡಿ,ಶರಣಪ್ಪ ಕೋಳಗೇರಿ,ಶಾಮ ಹೊಸ್ಮನಿ, ಅಜೀವ್ ಚೌಧರಿ,ದಲಿತ ಸೇನೆ ಅಧ್ಯಕ್ಷ ಮಹಾದೇವ ಬಂಕಲಗಿ,ಕುಮಾರ ಕೋಳಗೇರಿ,ಯುವ ಕಾಂಗ್ರೆಸ್ ಅಧ್ಯಕ್ಷ ಪ್ರವೀಣ ಕಲ್ಲೂರ, ಸಿದ್ದು ಚೌಡಾಪುರ, ಶಿವಲಿಂಗ ಆರೇಕರ,ರವಿ ಧಾನೇನವರ,ಶಶಿ ಆರೇಕರ,ಮಹೇಶ ಹೊಸ್ಮನಿ,ಗೋಪಾಲ ನಾಟೀಕಾರ,ದತ್ತು ಬಂಕಲಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಬ್ರಿಮ್ಸ್‌ನಲ್ಲಿ ಪಿಜಿ ವೈದ್ಯ ವಿದ್ಯಾರ್ಥಿ ಮೇಲೆ ಹಲ್ಲೆ ಖಂಡನೆ: ಡಾ. ತುಕಾರಾಂ ಭೇಟಿ ಮಾಡಿದ ಸಂಸದ ಸಾಗರ ಖಂಡ್ರೆ

ಬೀದರ, ಮೇ.22-

ಬೀದರ ಬ್ರಿಮ್ಸ್ ಆಸ್ಪತ್ರೆಯಲ್ಲಿ ಪಿಜಿ ಪ್ರಥಮ ವರ್ಷದ ಅರ್ಥೋಪೆಡಿಕ್ ವಿದ್ಯಾರ್ಥಿ ಡಾ. ತುಕಾರಾಂ ಅವರ ಮೇಲೆ ನಡೆದ ಹಲ್ಲೆ ಪ್ರಕರಣವನ್ನು ಸಂಸದ ಸಾಗರ ಖಂಡ್ರೆ ತೀವ್ರವಾಗಿ ಖಂಡಿಸಿದ್ದಾರೆ.

ಇಂದು ಮಧ್ಯಾಹ್ನ 4.30 ಗಂಟೆಗೆ ಬ್ರಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿದ ಸಂಸದ ಸಾಗರ ಖಂಡ್ರೆ, ಗಾಯಗೊಂಡಿರುವ ಡಾ. ತುಕಾರಾಂ ಅವರ ಆರೋಗ್ಯ ವಿಚಾರಿಸಿದರು. ಈ ವೇಳೆ ಆಸ್ಪತ್ರೆಯ ವೈದ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಘಟನೆ ಕುರಿತು ಮಾಹಿತಿ ಪಡೆದು ಕೊಂಡರು.

ಈ ಪ್ರಕರಣ ಸಂಬಂಧ ಈಗಾಗಲೇ ಏಳು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆಯ ಬಳಿಕ ಮಾತನಾಡಿದ ಸಂಸದ ಸಾಗರ ಖಂಡ್ರೆ, ಜೀವ ಉಳಿಸುವ ವೈದ್ಯರ ಮೇಲೆಯೇ ಹಲ್ಲೆ ನಡೆಯುತ್ತಿರುವುದು ಅತ್ಯಂತ ದುಃಖಕರ ಮತ್ತು ಖಂಡನೀಯ ಸಂಗತಿ. ವೈದ್ಯರ ಮೇನೆ ಇಂತಹ ದಾಳಿಗಳು ಮರುಕಳಿಸಬಾ ರದು ಎಂದು ಆತಂಕ ವ್ಯಕ್ತಪಡಿಸಿ ದರು. ಪ್ರಕರಣ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ಹೇಳಿದರು. ಸೂಕ್ತ ತನಿಖೆ ನಡೆಸಿ ಶೀಘ್ರದಲ್ಲೇ ಚಾರ್ಜ್‌ಶೀಟ್ ಸಲ್ಲಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬ್ರಿಮ್ಸ್ ಆಸ್ಪತ್ರೆಯಲ್ಲಿ ಭದ್ರತೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದ್ದು, ಪೊಲೀಸ್ ಸಿಬ್ಬಂದಿ ಸಂಖ್ಯೆಯನ್ನು ದ್ವಿಗುಣಗೊಳಿಸಲಾಗಿದೆ. ಈ ಹಿಂದೆ ಕರ್ತವ್ಯದಲ್ಲಿದ್ದ ಮೂವರು ಪೊಲೀಸರ ಬದಲಿಗೆ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಜೊತೆಗೆ ಹೊಸ ಭದ್ರತಾ ಏಜೆನ್ಸಿ ಯ ಮೂಲಕ ಸುಮಾರು 50 ಭದ್ರತಾ ಸಿಬ್ಬಂದಿಯನ್ನು ನೇಮಕ ಮಾಡುವ ಪ್ರಕ್ರಿಯೆ ಆರಂಭಿಸಲಾಗಿದೆ.

ರಾಜ್ಯದ ವಿವಿಧ ಭಾಗಗಳಲ್ಲಿ ವೈದ್ಯರ ಮೇಲಿನ ಹಲ್ಲೆ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆ ವೈದ್ಯರ ರಕ್ಷಣೆಗೆ ವಿಶೇಷ ಕಾನೂನು ಜಾರಿಗೆ ತರಬೇಕೆಂದು ಸಂಸದ ಸಾಗರ ಖಂಡ್ರೆ ಒತ್ತಾಯಿಸಿದರು. ರಾತ್ರಿ-ಹಗಲು ಸೇವೆ ಸಲ್ಲಿಸುವ ವೈದ್ಯರಿಗೆ ಭದ್ರತೆ ಒದಗಿಸುವುದು ಸರ್ಕಾರದ ಜವಾ ಬ್ದಾರಿ ಎಂದು ಅವರು ಹೇಳಿದರು.

31 ರಂದು ಕಸಾಪ ಕನ್ನಡ ಭಾಷಾ ಗುಣಾಗ್ರಣಿ ಪ್ರಶಸ್ತಿ

ಸುರಪುರ,ಮೇ.23-

2025-26ನೇ ಸಾಲಿನ ಎಸ್ ಎಲ್ ಸಿ ಒಂದನೇ ಪರೀಕ್ಷೆಯಲ್ಲಿ ಪ್ರಥಮ ಭಾಷೆ ಕನ್ನಡ ಮತ್ತು ದ್ವಿತೀಯ ಭಾಷೆ ಕನ್ನಡ ವಿಷಯದಲ್ಲಿ

ಪ್ರತಿಶತ ನೂರರಷ್ಟು ಅಂಕಗಳನ್ನು ಪಡೆದ ವಿದ್ಯಾರ್ಥಿ/ ವಿದ್ಯಾರ್ಥಿನಿ ಯರಿಗೆ ಸುರಪುರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಕನ್ನಡ ಭಾಷಾ ಗುಣಾಗ್ರಣಿ ಪ್ರಶಸ್ತಿ ನೀಡಿ ಗೌರವಿಸಲಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕ ಅಧ್ಯಕ್ಷ ಶರಣಬಸಪ್ಪ ಯಾಳವಾರ ತಿಳಿಸಿದ್ದಾರೆ.

''ಜನರ ಹಣದಲ್ಲಿ ರಸ್ತೆ - ಅಧಿಕಾರಿಗಳ ಮೌನಕ್ಕೆ ದತ್ತ ನಗರದ ಪ್ರಶ್ನೆ!''

ಜೇವರ್ಗಿ : ಪಟ್ಟಣದ ದತ್ತ ನಗರದ ಬಡಾವಣೆಯ ಎರಡನೇ ಕ್ರಾಸ್ ನ ಹತ್ತಿರ ಈ ಹಿಂದೆ ಜ್ಞಾನ ಜ್ಯೋತಿ ಶಿಕ್ಷಣ ಸಂಸ್ಥೆಯ ಹತ್ತಿರ ತಮ್ಮ ಸ್ವಂತ ಖರ್ಚಿನಲ್ಲಿ ಸಿಸಿ ರಸ್ತೆ ಮಾಡಿದ್ದು ಅಧಿಕಾರಿಗಳ ಗಮನಕ್ಕೆ ಬಂದರೂ ಕೂಡಾ ಅಧಿಕಾರಿಗಳು ಮೌನವಾಗಿರುವ ಕಾರಣ ಮತ್ತೆ ಇನ್ನೊಂದು ಕಡೆ ಮೇ.22 ರಂದು ದತ್ತ ನಗರದ ನಿವಾಸಿಗಳು ಸ್ವಂತ ಖರ್ಚಿನಲ್ಲಿ ಸಿಸಿ ರಸ್ತೆ ನಿರ್ಮಾಣ ಮಾಡಿಕೊಂಡಿರುವುದು ಒಂದು ಕಡೆ ಜನರ ಏಕತೆಯನ್ನೂ, ಮತ್ತೊಂದು ಕಡೆ ಆಡಳಿತ ವ್ಯವಸ್ಥೆಯ ವೈಫಲ್ಯವನ್ನೂ ಸ್ಪಷ್ಟವಾಗಿ ತೋರಿಸುತ್ತದೆ. ಮಳೆಗಾಲದಲ್ಲಿ ಎದುರಿಸಿದ ಸಂಕಷ್ಟಗಳು ಮತ್ತೆ ಮರುಕಳಿಸಬಾರದೆಂಬ ಉದ್ದೇಶದಿಂದ ಜನರು ತಮ್ಮದೇ ಹಣ ಖರ್ಚು ಮಾಡಿ ರಸ್ತೆ ನಿರ್ಮಾಣಕ್ಕೆ ಮುಂದಾಗಿರುವುದು ಶ್ಲಾಘನೀಯವಾದರೂ, ಇದು ವ್ಯವಸ್ಥೆಯ ವೈಫಲ್ಯಕ್ಕೆ ದೊಡ್ಡ ಉದಾಹರಣೆ.

ಮೂಲಭೂತ ಸೌಕರ್ಯಗಳನ್ನು ಒದಗಿಸುವ ಜವಾಬ್ದಾರಿ ಹೊಂದಿರುವ ಪಟ್ಟಣ ಪಂಚಾಯತಿ ಸದಸ್ಯರು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಈ ವಿಷಯದಲ್ಲಿ ನಿರ್ಲಕ್ಷ್ಯ ತೋರಿರುವುದು ಪ್ರಶ್ನಾರ್ಹ. ಜನರ ಕಣ್ಣಿಗೆ ಕಂಡ ಸಮಸ್ಯೆಗಳಿಗೂ ಸ್ಪಂದಿಸದೇ ಜಾಣ ಮೌನ ವಹಿಸಿರುವುದು, ಜನರಲ್ಲಿ ಆಡಳಿತದ ಮೇಲಿನ ನಂಬಿಕೆಯನ್ನು ಕುಗ್ಗಿಸುವಂತಾಗಿದೆ.

''ತೆರಿಗೆ ಕಟ್ಟುವ ಜನರೇ ಮತ್ತೆ ತಮ್ಮ ಹಣದಲ್ಲಿ ರಸ್ತೆ ಮಾಡಿಸಿಕೊಳ್ಳಬೇಕಾದ ಪರಿಸ್ಥಿತಿ ಬಂದರೆ, ಸರ್ಕಾರದ ಯೋಜನೆಗಳು ಯಾರಿಗಾಗಿ?'' ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ದತ್ತ ನಗರದ ಈ ಘಟನೆ ಕೇವಲ ಒಂದು ಬಡಾವಣೆಯ ಸಮಸ್ಯೆಯಾಗಿಲ್ಲ; ಇದು ಗ್ರಾಮ-ಪಟ್ಟಣ ಆಡಳಿತ ವ್ಯವಸ್ಥೆಯ ದೌರ್ಬಲ್ಯವನ್ನು ಬಯಲಿಗೆಳೆಯುವ ಘಟನೆಯಾಗಿದೆ.

ಈಗಾದರೂ ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಂಡು, ದತ್ತ ನಗರ ಸೇರಿದಂತೆ ಇತರೆ ಬಡಾವಣೆಗಳ ಮೂಲಭೂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಒದಗಿಸಬೇಕು. ಇಲ್ಲವಾದರೆ ''ಜನರ ಹಣ ಜನರ ಕೆಲಸ'' ಎಂಬ ಪರಿಸ್ಥಿತಿ ಸಾಮಾನ್ಯವಾಗುವ ಅಪಾಯವಿದೆ.




ದತ್ತ ನಗರದಲ್ಲಿ ಸಿ ಸಿ ರಸ್ತೆ ಮಾಡುತ್ತಿರುವುದು

ನಿಮ್ಮೂರು ಸುದ್ದಿ

ಸಂಪಾದಕೀಯ

ವರದಕ್ಷಿಣೆ ಎಂಬ ಬಲಿಪೀಠದಿಂದ ಹೆಣ್ಣುಮಕ್ಕಳ ರಕ್ಷಣೆ ಯಾವಾಗ?



ಶಿಕ್ಷಣವು 'ವರದಕ್ಷಿಣೆ' ಪಿಡುಗನ್ನು ತಡೆಯುವ ಬದಲು ಅದಕ್ಕೊಂದು ಬೆಲೆ ನಿಗದಿಪಡಿಸುವ ಸಾಧನವಾಗಿದೆ. ಹೆಚ್ಚು ಅರ್ಹತೆ ಹೊಂದಿರುವ ವರನಿಗೆ ಮಾರುಕಟ್ಟೆಯಲ್ಲಿ ವರದಕ್ಷಿಣೆಯ ಬೇಡಿಕೆಯೂ ಹೆಚ್ಚಿರುತ್ತದೆ. ಮಗನ ಶಿಕ್ಷಣಕ್ಕೆ ಮಾಡಿದ ಹೂಡಿಕೆಯನ್ನೂ ಸೊಸೆಯ ಮನೆಯವರಿಂದ ವಸೂಲಿ ಮಾಡುವ ಒಂದು ವ್ಯವಹಾರದ ತಂತ್ರವಾಗಿ ಶಿಕ್ಷಣ ಬಳಕೆಯಾಗುತ್ತಿದೆ.

ಒಂದು ಅತ್ಯಾಧುನಿಕ ಎಸ್‌ಯುವಿ ಕಾರು, ರಾಯಲ್ ಎನ್‌ಫೀಲ್ಡ್ ಮೋಟಾರ್ ಸೈಕಲ್, ಅರ್ಧ ಕೆಜಿಯಷ್ಟು ಚಿನ್ನ ಹಾಗೂ ಅಪಾರ ಪ್ರಮಾಣದ ನಗದುಇಷ್ಟೆಲ್ಲವನ್ನೂ ಕೊಟ್ಟ ಮೇಲೂ ನಿಕ್ಕಿ ಭಾಟಿ ಎಂಬ ಯುವತಿಯ ಪತಿ ವಿಪಿನ್ ಭಾಟಿ ಮನೆಯವರ ಆಸೆ ತೀರಲಿಲ್ಲ. ಮತ್ತಷ್ಟು ಹಣಕ್ಕಾಗಿ ಆಕೆಯ ಮೇಲೆ ನಿರಂತರ ದೈಹಿಕ ಮತ್ತು ಮಾನಸಿಕ ದೌರ್ಜನ್ಯ ನಡದವು. ಕೊನೆಗೆ, ಆಕೆಯ ಪುಟ್ಟ ಮಗುವಿನೆದುರೇ ಆಕೆಯನ್ನು ಜೀವಂತವಾಗಿ ಸುಟ್ಟು ಹಾಕಿತು ಆ ವಿಕೃತ ಕ್ರೂರ ಭಾಟಿ ಕುಟುಂಬ.

ಅಂತೆಯೇ, ಇತ್ತೀಚೆಗೆ ಭೋಪಾಲ್‌ನಲ್ಲಿ ಎಂಬಿಎ ಪದವೀಧರೆ ತ್ವಿಶಾ ಶರ್ಮಾ ಮತ್ತು ಗ್ರೇಟರ್ ನೋಯ್ಡಾದಲ್ಲಿ ದೀಪಿಕಾ ನಾಗರ್ ಅವರ ನಿಗೂಢ ಸಾವುಗಳು ಕೇವಲ ವೈಯಕ್ತಿಕ ದುರಂತಗಳಲ್ಲ; ಇವು ಭಾರತೀಯ ಸಮಾಜದ ಆಳದಲ್ಲಿ ಬೇರೂರಿರುವ ವರದಕ್ಷಿಣೆ ಮತ್ತು ಸಂಗಾತಿಯ ಹಿಂಸಾಚಾರದ ಭೀಕರ ಮುಖಗಳು. 65 ವರ್ಷಗಳ ಹಿಂದೆಯೇ ಕಾನೂನುಬದ್ಧವಾಗಿ ನಿಷೇಧಿಸಲ್ಪಟ್ಟ ವರದಕ್ಷಿಣೆ ಎಂಬ ಅನಾಧಿಕಾಲದ ಕ್ರೂರ ಪದ್ಧತಿ, ಇಂದಿಗೂ ಪ್ರಗತಿಪರ ದೇಶದ ಅಂತರ್ಯದಲ್ಲಿ ಹೆಣ್ಣುಮಕ್ಕಳ ಮಾರಣಹೋಮ ನಡೆಸುತ್ತಿದೆ. ಕ್ರೌರ್ಯ ಮುಂದುವರೆದಿದೆ.

ನಗರೀಕರಣ ಮತ್ತು ಉನ್ನತ ಶಿಕ್ಷಣವು ಮಹಿಳೆಯರಿಗೆ ಸುರಕ್ಷತೆಯನ್ನು ಒದಗಿಸುತ್ತದೆ ಎಂಬುದು ಕೇವಲ ಒಂದು ಭ್ರಮೆ ಎಂಬುದನ್ನು ಇತ್ತೀಚಿನ ಘಟನೆಗಳು ಮತ್ತು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ () ಸಾಬೀತುಪಡಿಸಿವೆ. ನಿಕ್ಕಿ, ತ್ವಿಶಾ ಹಾಗೂ ದೀಪಿಕಾ ಈ ಮೂವರ ಪತಿಯಂದಿರು ಕಾನೂನು ಕ್ಷೇತ್ರದಲ್ಲಿ (ವಕೀಲಿಕೆ) ಕೆಲಸ ಮಾಡುತ್ತಿದ್ದವರು ಅಥವಾ ಉನ್ನತ ಶಿಕ್ಷಣ ಪಡೆದವರಾಗಿದ್ದರು. ಅಲ್ಲದೆ ಇವರೆಲ್ಲರೂ ವಾಸಿಸುತ್ತಿದ್ದುದು ಮೆಟ್ರೋಪಾಲಿಟನ್ ನಗರಗಳಲ್ಲಿ. ಉನ್ನತ ಶಿಕ್ಷಣ, ನಗರದ ಬದುಕು, ಆಧುನಿಕ ಜಗತ್ತಿನಲ್ಲಿಯೂ ಅವರೊಳಗಿನ ಗಂಡಾಳ್ವಿಕೆಯ ಮನಸ್ಥಿತಿ ಬದಲಾಗಲಿಲ್ಲ.

ಬಿಬಿಸಿ ವರದಿ ಮಾಡಿದ 2023ರ ಅಧ್ಯಯನದ ಪ್ರಕಾರ, ಶಿಕ್ಷಣವು ಈ ಪಿಡುಗನ್ನು ತಡೆಯುವ ಬದಲು ಅದಕ್ಕೊಂದು ಬೆಲೆ ನಿಗದಿಪಡಿಸುವ ಸಾಧನವಾಗಿದೆ. ಹೆಚ್ಚು ಅರ್ಹತೆ ಹೊಂದಿರುವ ವರನಿಗೆ ಮಾರುಕಟ್ಟೆಯಲ್ಲಿ ವರದಕ್ಷಿಣೆಯ ಬೇಡಿಕೆಯೂ ಹೆಚ್ಚಿರುತ್ತದೆ. ಮಗನ ಶಿಕ್ಷಣಕ್ಕೆ ಮಾಡಿದ ಹೂಡಿಕೆಯನ್ನೂ ಸೊಸೆಯ ಮನೆಯವರಿಂದ ವಸೂಲಿ ಮಾಡುವ ಒಂದು ವ್ಯವಹಾರದ ತಂತ್ರವಾಗಿ ಶಿಕ್ಷಣ ಬಳಕೆಯಾಗುತ್ತಿದೆ. ವಿವಾಹಗಳು ಮಾರುಕಟ್ಟೆಯಾಗಿ ಮಾರ್ಪಟ್ಟಿವೆ.

ಎನ್‌ಸಿಆರ್‌ಬಿಯ 2024ರ ದತ್ತಾಂಶದ ಪ್ರಕಾರ, ಭಾರತದಲ್ಲಿ ವಾರ್ಷಿಕವಾಗಿ 5,737 ವರದಕ್ಷಿಣೆ ಸಾವುಗಳು ದಾಖಲಾಗುತ್ತಿವೆ. ಅಂದರೆ ಸರಾಸರಿ ದಿನಕ್ಕೆ 16 ಹೆಣ್ಣುಮಕ್ಕಳು ಬಲಿಯಾಗುತ್ತಿದ್ದಾರೆ. ಇಡೀ ದೇಶದಲ್ಲಿ ಮಹಿಳೆಯರ ಮೇಲಿನ ಅಪರಾಧಗಳ ಪೈಕಿ ಪತಿ ಅಥವಾ ಆತನ ಸಂಬಂಧಿಕರಿಂದ ಕ್ರೌರ್ಯ ಅಪರಾಧಗಳು ಅಗ್ರಸ್ಥಾನದಲ್ಲಿವೆ. ಮೆಟ್ರೋ ನಗರಗಳ ಪೈಕಿ ದೆಹಲಿ 109 ಸಾವುಗಳನ್ನು ಕಂಡಿದ್ದು, ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ.

ಮತ್ತೊಂದು ಆಘಾತಕಾರಿ ಅಂಶವೆಂದರೆ, 5ನೇ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (-5) ಪ್ರಕಾರ, ಭಾರತದಲ್ಲಿ ವಿವಾಹಿತ ಮಹಿಳೆಯರ ಪೈಕಿ 31.9%ರಷ್ಟು ಮಹಿಳೆಯರು ದೈಹಿಕ, ಲೈಂಗಿಕ ಅಥವಾ ಭಾವನಾತ್ಮಕ ಹಿಂಸೆಯನ್ನು ಅನುಭವಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಈ ಪ್ರಮಾಣ 34%ರಷ್ಟಿದ್ದರೆ, ನಗರ ಪ್ರದೇಶಗಳಲ್ಲಿ 27%ರಷ್ಟಿದೆ. ಈ ಅತ್ಯಲ್ಪ ವ್ಯತ್ಯಾಸವು ನಗರ ಪ್ರದೇಶಗಳಲ್ಲಿಯೂ ಕೌಟುಂಬಿಕ ಶೋಷಣೆಗಳಿಂದ ರಕ್ಷಣೆ ಇಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತದೆ. ಶ್ರೀಮಂತ ವರ್ಗದಲ್ಲಿ ವಿವಾಹ ವೆಚ್ಚವು ಅತ್ಯಂತ ಪ್ರತಿಷ್ಠಿತ ಮದುವೆಗಳ ರೂಪದಲ್ಲಿ ರಹಸ್ಯ ಆರ್ಥಿಕತೆಯಾಗಿ ನಡೆಯುತ್ತವೆ. ಈ ದುಬಾರಿಗೆ ಮದುವೆಗಳ ಹೊರೆಯೂ ವಧು ಮತ್ತು ಆಕೆಯ ಕುಟುಂಬದ ಮೇಲೆಯೇ ಬೀಳುತ್ತದೆ.

ಈ ಪ್ರಮಾಣದ ಕ್ರೌರ್ಯ ಸಮಾಜದಲ್ಲಿ ತಾಂಡವವಾಡುತ್ತಿರುವ ಸಮಯದಲ್ಲಿಯೂ, ಸಾಂಸ್ಥಿಕ ಲೋಪವು ಮಹಿಳೆಯರ ಬದುಕನ್ನು ಜರ್ಜರಿತಗೊಳಿಸಿದೆ. ದತ್ತಾಂಶದ ಪ್ರಕಾರ, ಕೇವಲ 1%ರಷ್ಟು ಸಂತ್ರಸ್ತ ಮಹಿಳೆಯರು ಮಾತ್ರ ಕಾನೂನು ಸಂಸ್ಥೆಗಳ ನೆರವು ಪಡೆಯುತ್ತಿದ್ದಾರೆ. ಉಳಿದೆಲ್ಲ ಸಂತ್ರಸ್ತೆಯರು ಕೌಟುಂಬಿಕ ದೌರ್ಜನ್ಯಕ್ಕೆ ಬಲಿಯಾಗುತ್ತಿದ್ದಾರೆ, ಹಿಂಸೆಯನ್ನು ಸಹಿಸಿಕೊಂಡೇ ಜೀವನ ದೂಡುತ್ತಿದ್ದಾರೆ. ಎನ್‌ಸಿಆರ್‌ಬಿ ಸಮೀಕ್ಷೆಯಲ್ಲಿ ದಾಖಲಾಗುವ ವಾರ್ಷಿಕ ಸುಮಾರು 1.20 ಲಕ್ಷ ಕೌಟುಂಬಿಕ ದೌರ್ಜನ್ಯ ಪ್ರಕರಣಗಳು ಕೇವಲ ಕಾನೂನು ಪ್ರಕ್ರಿಯೆಯ ಮಿತಿಯನ್ನು ತೋರಿಸುತ್ತವೆಯೇ ಹೊರತು, ಸಮಾಜದಲ್ಲಿನ ನೈಜ ಹಿಂಸಾಚಾರದ ಆಳವನ್ನು ಬಿಂಬಿಸುತ್ತಿಲ್ಲ.

ಮತ್ತೊಂದೆಡೆ, ವರದಕ್ಷಿಣೆ ಹಿಂಸಾಚಾರ ಇಷ್ಟೊಂದು ಭೀಕರ ರೂಪ ಪಡೆಯಲು ಸಮಾಜದಲ್ಲಿನ ನಾರ್ಮಲೈಸೇಶನ್ (ಸ್ವಾಭಾವಿಕಗೊಳಿಸುವಿಕೆ) ಮುಖ್ಯ ಕಾರಣ. ಮದುವೆಯಾದ ಮೇಲೆ ಹೆಣ್ಣುಮಗಳು ಪತಿಯ ಮನೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕು, ಸಹನೆಯಿಂದ ಇರಬೇಕು ಎಂಬ ಕಿವಿಮಾತುಗಳು ತವರು ಮನೆಯಿಂದ ಹಿಡಿದು ಧಾರಾವಾಹಿ, ಸಿನೆಮಾಗಳವರೆಗೆ ಸದ್ಗುಣಗಳಂತೆ ಬಿಂಬಿಸಲಾಗುತ್ತಿದೆ. ಈ ಸದ್ಗುಣದ ಮುಖವಾಡದ ಹಿಂದೆ ಹೆಣ್ಣು ಕಿರುಕುಳ ಅನುಭವಿಸುತ್ತಾ, ಉಸಿರುಗಟ್ಟುತ್ತಿದ್ದಾಳೆ. ಆದರೂ, ಅದನ್ನು ಮರೆಮಾಡಲಾಗುತ್ತಿದೆ. ಜೊತೆಗೆ, ಹೆಣ್ಣುಮಕ್ಕಳು ಪತಿಯ ಮನೆಯ ಕ್ರೌರ್ಯವನ್ನು ಸಹಿಸಿಕೊಂಡು ಸಾಯಬೇಕೇ ಹೊರತು, ಗಂಡನಿಂದ ದೂರವಾಗಬಾರದು ಎಂಬ ಸಾಂಪ್ರದಾಯಿಕ ಕಟ್ಟುಪಾಡು ಅವರನ್ನು ಮತ್ತಷ್ಟು ಹಿಂಸಿಸುತ್ತಿದೆ.

ತ್ವಿಶಾ ಶರ್ಮಾ ತನ್ನ ತಾಯಿಗೆ ಕಳುಹಿಸಿದ ವಾಟ್ಸಾಪ್ ಸಂದೇಶದಲ್ಲಿ ನನಗೆ ಇಲ್ಲಿ ತುಂಬಾ ಉಸಿರುಗಟ್ಟುತ್ತಿದೆ, ಅಮ್ಮ ಎಂದು ಅಳಲು ತೋಡಿಕೊಂಡಿದ್ದರು. ನಿಕ್ಕಿ ಭಾಟಿ ಪೊಲೀಸ್ ಠಾಣೆಯ ಬದಲು ಸ್ಥಳೀಯ ಪಂಚಾಯಿತಿಯ ಮೊರೆ ಹೋಗಿದ್ದರು. ಆದರೆ, ಆ ಪಂಚಾಯಿತಿ ಆಕೆಯ ಆರ್ಥಿಕ ಸ್ವಾವಲಂಬನೆಯನ್ನು ಹತ್ತಿಕ್ಕಲು ಆಕೆ ಸಾಮಾಜಿಕ ಜಾಲತಾಣಗಳಲ್ಲಿ ಕಂಟೆಂಟ್ ಮಾಡುವುದನ್ನು ನಿಲ್ಲಿಸಬೇಕೆಂದು ಆದೇಶಿಸಿತೇ ಹೊರತು, ಆಕೆಯ ಸಮಸ್ಯೆಗೆ ಪರಿಹಾರವಿರಲಿ, ಆಕೆಯನ್ನು ಸಂತೈಸುವ ಗೋಜಿಗೂ ಹೋಗಲಿಲ್ಲ.

ಒಂದು ವೇಳೆ, ಮಹಿಳೆ ಧೈರ್ಯ ಮಾಡಿ ಪೊಲೀಸ್ ಠಾಣೆ ಮೆಟ್ಟಿಲು ಹತ್ತಿದರೂ, ನಮ್ಮ ನ್ಯಾಯ ವ್ಯವಸ್ಥೆಯು ಆಕೆಯನ್ನು ದಣಿಯುವಂತೆ ಮಾಡುತ್ತದೆ. 2022ರ ನ್ಯಾಯಾಲಯ ವಿಲೇವಾರಿ ದತ್ತಾಂಶದ ಪ್ರಕಾರ, ವಿಚಾರಣೆಗೆ ಬಂದ ಒಟ್ಟು ಪ್ರಕರಣಗಳಲ್ಲಿ ಕೇವಲ2.03%ರಷ್ಟು ಮಾತ್ರ ಶಿಕ್ಷೆಯ ಹಂತವನ್ನು ತಲುಪಿವೆ. 2022ರಲ್ಲಿ ಬರೋಬ್ಬರಿ 60,577 ವರದಕ್ಷಿಣೆ ಸಾವುಗಳ ಪ್ರಕರಣಗಳು ಬಾಕಿ ಇದ್ದು, ಹೊಸದಾಗಿ 6,160 ಪ್ರಕರಣಗಳು ಸೇರ್ಪಡೆಯಾಗಿವೆ. ಇವುಗಳಲ್ಲಿ ಕೇವಲ 1,231 ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗಿದೆ. ಉಳಿದವೆಲ್ಲವೂ, ನ್ಯಾಯಾಲಯದ ಮೆಟ್ಟಿನಲ್ಲಿ ನ್ಯಾಯಕ್ಕಾಗಿ ಕಾಯುತ್ತಾ ಸರದಿಯಲ್ಲಿ ನಿಂತಿವೆ.

ಈ ದೀರ್ಘಾವಧಿಯ ನ್ಯಾಯಾಂಗ ವಿಳಂಬವು ಪ್ರಭಾವಿ ಮತ್ತು ಶ್ರೀಮಂತ ಅಪರಾಧಿಗಳಿಗೆ ಮುಂಗಡ ಜಾಮೀನು ಪಡೆಯಲು, ವೈದ್ಯಕೀಯ ವರದಿಗಳನ್ನು ತಿರುಚಲು ಹಾಗೂ ಸಾಕ್ಷ್ಯಗಳನ್ನು ನಾಶಪಡಿಸಲು ಪೂರಕ ವಾತಾವರಣವನ್ನು ನಿರ್ಮಿಸಿಕೊಡುತ್ತಿವೆ. ಇನ್ನು ಅನೇಕ ಸಾವುಗಳನ್ನು ಅಪಘಾತ ಅಥವಾ ಆತ್ಮಹತ್ಯೆ ಎಂದು ದಾಖಲಿಸಿ ಪ್ರಕರಣವನ್ನು ಮುಚ್ಚಿಹಾಕಲಾಗುತ್ತದೆ.

ತ್ವಿಶಾ, ಸಿಕ್ಕಿ, ದೀಪಿಕಾರಂತಹ ಕೆಲವು ಪ್ರಕರಣಗಳು ಬೆಳಕಿಗೆ ಬಂದಾಗ, ವರದಕ್ಷಿಣೆ ಪಿಡುಗಿನ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಭಾರೀ ಆಕ್ರೋಶ ವ್ಯಕ್ತವಾಗುತ್ತದೆ. ಆದರೆ, ಕೆಲ ಕ್ಷಣದ ಆಕ್ರೋಶವು ಸಾಮಾಜಿಕ ವ್ಯವಸ್ಥೆಯನ್ನು ಬದಲಿಸಲಾಗದು. ಇದಕ್ಕೆ, ತಳಮಟ್ಟದ ಸಾಂಸ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳ ಅಗತ್ಯವಿದೆ.

ಬಾಕಿ ಇರುವ ಸಾವಿರಾರು ವರದಕ್ಷಿಣೆ ಮತ್ತು ಗೃಹಹಿಂಸೆ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವ ತುರ್ತು ಅಗತ್ಯ ಕಾನೂನು ವ್ಯವಸ್ಥೆಗಿದೆ. ಅಂತೆಯೇ, ರಾಷ್ಟ್ರೀಯ ಅಪರಾಧ ತನಿಖಾ ವ್ಯವಸ್ಥೆಯನ್ನು ಮುನ್ಸಿಪಲ್ ಮತ್ತು ಸಾರ್ವಜನಿಕ ಆಸ್ಪತ್ರೆಗಳ ತುರ್ತು ನಿಗಾ ಘಟಕಗಳೊಂದಿಗೆ ಜೋಡಿಸುವುದೂ ಕೂಡ ಮುಖ್ಯವಾಗಿದೆ. ವಿವಾಹಿತ ಮಹಿಳೆಯರಲ್ಲಿ ಪದೇ ಪದೇ ಕಂಡುಬರುವ ನಿಗೂಢ ಗಾಯಗಳು, ಸುಟ್ಟ ಗಾಯಗಳು ಅಥವಾ ಮೂಳೆ ಮುರಿತಗಳ ಬಗ್ಗೆ ಆಸ್ಪತ್ರೆ ದಾಖಲಿಸಿದ ತಕ್ಷಣ ತನಿಖಾ ಸಂಸ್ಥೆಗಳಿಗೆ ಸ್ವಯಂಚಾಲಿತ ಸಂದೇಶ ಹೋಗುವಂತಹ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ದಾರಿಯೂ ನಮ್ಮೆದುರಿಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ; ಸಂಸಾರ ಅಂದಮೇಲೆ ಇದೆಲ್ಲ ಇದ್ದಿದ್ದೇ, ಹೊಂದಿಕೊಂಡು ಹೋಗು ಎಂದು ಮಹಿಳೆಯನ್ನು ಸಾವಿನ ದವಡೆಗೆ ತಳ್ಳುವ ಸಮಾಜದ ಮನಸ್ಥಿತಿ ತ್ವರಿತವಾಗಿ ಬದಲಾಗಬೇಕಿದೆ. ಹಿಂಸೆಯ ವಿರುದ್ಧ ಧ್ವನಿ ಎತ್ತುವ ಹೆಣ್ಣಿಗೆ ತವರು ಮನೆ ಮತ್ತು ಸಮಾಜವು ಭದ್ರತೆಯ ಆಸರೆಯಾಗಬೇಕಾದ ಅಗತ್ಯವಿದೆ. ಇಡೀ ಸಮಾಜವನ್ನು ಕ್ಯಾನ್ಸರ್ ರೀತಿ ಕಾಡುತ್ತಿರುವ ವರದಕ್ಷಿಣೆಯನ್ನು ಬುಡಸಮೇತ ಕಿತ್ತುಹಾಕಬೇಕಿದೆ. ಹೆಣ್ಣುಮಕ್ಕಳಿಗೆ ಅಕ್ಷರ ಕಲಿಸುವ ಜೊತೆಗೆ, ಆತ್ಮಗೌರವದಿಂದ ಬದುಕುವ, ಕ್ರೌರ್ಯದ ವಿರುದ್ಧ ತಿರುಗಿಬೀಳುವ ಧೈರ್ಯವನ್ನು ತುಂಬಬೇಕಿದೆ. ಆಗ ಮಾತ್ರವೇ, ನಿಕ್ಕಿ, ತ್ವಿಶಾ, ದೀಪಿಕಾರಂತಹ ಅಮಾಯಕ ಜೀವಗಳನ್ನು ಬಲಿಪೀಠದಿಂದ ರಕ್ಷಿಸಲು ಸಾಧ್ಯವಾಗುತ್ತದೆ.

ನ್ಯೂಯಾರ್ಕ್‌ನಲ್ಲಿ ಭಾರತದ ಚಲನಚಿತ್ರ ಹಬ್ಬಕ್ಕೆ ಕ್ಷಣಗಣನೆ

ಇಂದು ಜಾಗತಿಕ ಮಟ್ಟದಲ್ಲಿ ಭಾರತದ ಚಿತ್ರಗಳ ಸ್ಥಾನಮಾನವನ್ನು ಗಟ್ಟಿಗೊಳಿಸಲು ಸಹಕಾರಿಯಾಗುವ ವೇದಿಕೆ. ಇನ್ನೊಂದು ರೀತಿಯಲ್ಲಿ ಭಾರತದ ಕಲೆ, ಅಸ್ತಿತ್ವ, ಸಾಂಸ್ಕೃತಿಕ ಕೊಡುಕೊಳ್ಳುವಿಕೆಯ ಮಾಧ್ಯಮವಾಗುವ ಸಾಧ್ಯತೆ ಇದೆ. ಈ ಎಲ್ಲ ಕಾರಣಗಳಿಂದಾಗಿ ಮೇ 28ರಿಂದ ನಡೆಯಲಿರುವ ಇಲ್ಲಿನ ಭಾರತೀಯ ಸಮುದಾಯಕ್ಕೆ ಒಂದು ಬಹುಮುಖ್ಯ ಸಾಂಸ್ಕೃತಿಕ ಹಬ್ಬವಾಗಿದೆ. ನ್ಯೂಯಾರ್ಕ್‌ನಿಂದ ವರದಿ- ಮುರಳೀಧರ ಖಜಾನೆ

ನ್ಯೂಯಾರ್ಕ್ ನಲ್ಲಿ ಸದ್ಯಕ್ಕೆ ಭಾರತೀಯ ವಾತಾವರಣವಿದೆ. ಇಲ್ಲಿನ ಐದನೇ ಅವೆನ್ಯೂ (303 , 1007) ನಲ್ಲಿರುವ () ನಲ್ಲಿ ಒಂದು ರೀತಿಯ ಹಬ್ಬದ ವಾತಾವರಣ. ಇಲ್ಲಿ ಮೇ 28ರಿಂದ ನಡೆಯಲಿರುವ ಗಾಗಿ ಇಲ್ಲಿ ಎಲ್ಲ ಸಿದ್ಧತೆಗಳು ನಡೆದಿವೆ. ನ್ಯೂಯಾರ್ಕ್ ಇಂಡಿಯನ್ ಚಿತ್ರೋತ್ಸವವನ್ನು () ಹಮ್ಮಿಕೊಂಡಿದ್ದು, ಮೊದಲ ನಡೆದದ್ದು 2001ರಲ್ಲಿ. ಈ ಚಿತ್ರೋತ್ಸವದಲ್ಲಿ ಭಾರತದ ಕಥಾಚಿತ್ರಗಳೊಂದಿಗೆ ಸಾಕ್ಷ್ಯಚಿತ್ರಗಳು ಹಾಗೂ ಕಿರುಚಿತ್ರಗಳ ಪ್ರದರ್ಶನ ಕೂಡ ನಡೆಯಲಿದೆ.

ನ್ಯೂಯಾರ್ಕ್ ಭಾರತೀಯ ಚಿತ್ರಗಳ ಅಂತಾರಾಷ್ಟ್ರೀಯ ಚಿತ್ರೋತ್ಸವದ 26ನೇ ಆವೃತ್ತಿ ಇದು. ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳಲು 45 ಚಿತ್ರಗಳು ಆಯ್ಕೆಯಾಗಿವೆ. ಈ ಪೈಕಿ ಹೆಸರಿಸಬಹುದಾದ ಚಿತ್ರಗಳೆಂದರೆ, ಎಪ್ಪತ್ತರ ದಶಕದ ಬ್ಲಾಕ್‌ಬಸ್ಟರ್ ಎಂದು ಭಾರತೀಯ ಚಿತ್ರರಂಗದಲ್ಲಿ ಹೊಸ ಅಧ್ಯಾಯವನ್ನು ಬರೆದ ಶೋಲೆ ಬಹುಮುಖ್ಯ. '' ಈ ಚಿತ್ರ ನೋಡಲು ಈಗಾಗಲೇ ಟಿಕೆಟ್‌ಗಳು ಮಾರಾಟವಾಗಿ ಹೋಗಿವೆ. ಭಾರತೀಯರು ಐವತ್ತು ವರ್ಷದಷ್ಟು ಹಳೆಯದಾದ, ಆದರೆ ಈಗಲೂ ತನ್ನ ಪ್ರಭಾವವನ್ನು ಉಳಿಸಿಕೊಂಡಿರುವ ಹರೇ ಓ ಸಾಂಬಾ ಕೇಳಿಸಿಕೊಳ್ಳಲು ಕಾತುರರಾಗಿದ್ದಾರೆ ಎನ್ನಬಹುದು. ಶೋಲೆ ಮಾತ್ರವೇ ಅಲ್ಲದೆ, ಈಗಾಗಲೇ, ಕಲಾತ್ಮಕವಾಗಿ ಪ್ರೇಕ್ಷಕರ ಮನಸ್ಸನ್ನು ಗೆದ್ದಿರುವ ಹಿಂದಿ, ಅಸ್ಸಾಮಿ, ಪಂಜಾಬಿ, ಬಂಗಾಳಿ, ಮಲೆಯಾಳಂ ತಮಿಳು, ತೆಲುಗು, ಕನ್ನಡ, ಕಾಶ್ಮೀರಿ ಹಾಗೂ ಇತರ ಭಾಷೆಗಳ ಚಿತ್ರಗಳನ್ನು ಪ್ರದರ್ಶಿಸಲಾಗುವುದು. () () ಮತ್ತು ಚಿತ್ರಗಳೂ ಕೂಡ ಪ್ರದರ್ಶನಗೊಳ್ಳಲಿದೆ '' ಎಂದು ಪ್ರಖ್ಯಾತ ಚಿತ್ರ ವಿಮರ್ಶಕ, ಬರಹಗಾರ ಹಾಗೂ ಪತ್ರಕರ್ತ ಅಸೀಮ್ ಛಾಬ್ರಾ ಈ ದಿನ.ಕಾಮ್‌ನೊಂದಿಗೆ ಹಂಚಿಕೊಂಡರು.

ಅಸೀಮ್ ಛಾಬ್ರಾ ಅವರು ಈ ಗಾಗಿ 2011 ರಿಂದ ಚಿತ್ರಗಳನ್ನು ಆಯ್ಕೆ ಮಾಡುತ್ತಿದ್ದಾರೆ. ಇವರ ಆಯ್ಕೆಗಳು ಪ್ರೇಕ್ಷಕರ ಮೆಚ್ಚುಗೆಯನ್ನು ಗಳಿಸಿವೆ. ''ಭಾರತದ ಸ್ವತಂತ್ರ ಸಿನಿಮಾ ಚಿತ್ರಕರ್ತರಿಗೆ ಅತ್ಯಂತ ಮುಖ್ಯ ಎಂದು ಪರಿಗಣಿಸಲಾಗಿರುವ ಈ ಅಂತಾರಾಷ್ಟ್ರೀಯ ಚಿತ್ರೋತ್ಸವ ಉತ್ತರ ಅಮೆರಿಕದ ಎಲ್ಲ ವರ್ಗದ ಸಿನಿಮಾ ಪ್ರಿಯರನ್ನು ಆಕರ್ಷಿಸುತ್ತಿದೆ. ಈ ಚಿತ್ರೋತ್ಸವದ ಮೂಲ ಉದ್ದೇಶ ಭಾರತೀಯ ಸಮಾಜದ ಸಂಕೀರ್ಣ ಸಮಾಜವನ್ನು ಎಲ್ಲ ಮುಖಗಳಿಂದ ನೋಡುವಂಥ ಚಿತ್ರಗಳನ್ನು ಜಗತ್ತಿಗೆ ಪರಿಚಯಿಸುವುದು. ಅದು ಕಥಾಚಿತ್ರವಾಗಿರಬಹುದು, ಸಾಕ್ಷ್ಯಚಿತ್ರವಾಗಿರಬಹುದು ಅಥವಾ ಕಿರುಚಿತ್ರವಾಗಿರಬಹುದು..ಅವು ಭಾರತೀಯ ಸಮಾಜದ ವೈವಿಧ್ಯಮಯ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸುವುದು ಅಷ್ಟೇ



ಅಲ್ಲ, ಆ ನಿರ್ದೇಶಕರನ್ನು ಗುರುತಿಸುವುದು. ಅಷ್ಟೇ ಅಲ್ಲ. ಈ ಚಿತ್ರೋತ್ಸವ ಪ್ರಾಂತೀಯ ಚಿತ್ರಗಳನ್ನು ಪ್ರೋತ್ಸಾಹಿಸುವುದರ ಜೊತೆಗೆ ಸ್ವತಂತ್ರವಾಗಿ ಸಿನಿಮಾ ನಿರ್ದೇಶಿಸುವವರನ್ನು ರಾಷ್ಟ್ರೀಯ ಮನ್ನಣೆ ಪಡೆದ ಭಾರತದ ಚಿತ್ರಕರ್ತರನ್ನು ರೂಪಿಸಿದ ಚಿತ್ರಕರ್ತರ ಬಗ್ಗೆ ಕೂಡ ಅರಿವು ಮೂಡಿಸುತ್ತದೆ'' ಎನ್ನುತ್ತಾರೆ ಅಸೀಮ್.

ನಾನು ಈಗ ಸದ್ಯಕ್ಕೆ ಇರುವ ನ್ಯೂಯಾರ್ಕ್‌ನಲ್ಲಿ ಭೂಗೌಳಿಕ ಕಾರಣದಿಂದಾಗಿ ಹವಾಮಾನದ ವ್ಯತ್ಯಾಸವಿದ್ದರೂ, ಈಗ ಸದ್ಯಕ್ಕೆ ಬೇಸಿಗೆಯತ್ತ ತೆವಳುತ್ತಿದೆ. ಚುರುಕು ಬಿಸಿಲಿಗೆ ಜನ ಮೈಒಡ್ಡಿ ಬೆಳಗಿನ ಹವೆಗೆ ಸ್ಕೇಟಿಂಗ್, ಸೈಕ್ಲಿಂಗ್ ಮಾಡುತ್ತಾ ರಾಜಮಾರ್ಗದಲ್ಲಿಯೇ ಓಡಾಡುತ್ತಿದ್ದಾರೆ. ಇಲ್ಲಿನ ತಾಪಮಾನ 15 ಡಿಗ್ರಿ ಸೇಲ್ಷಿಯಸ್‌ನಿಂದ 25 ಡಿಗ್ರಿ ನಡುವೆ ತುಯ್ದಾಡುತ್ತಿದೆ. ಸಂಜೆ ಮಳೆ ಬರುತ್ತಿದೆ. ಇಂಥ ಹವಾಮಾನದ ಸಂದರ್ಭದಲ್ಲಿ ಈ ಚಿತ್ರೋತ್ಸವ ನಡೆಯುತ್ತಿದೆ. ಭಾರತದ ಪ್ರಮುಖ ಚಿತ್ರ ನಿರ್ದೇಶಕರು ನಿಧಾನವಾಗಿ ನ್ಯೂಯಾರ್ಕ್ ಗೆ ಆಗಮಿಸುತ್ತಿದ್ದಾರೆ. ತಮ್ಮ ಚಿತ್ರಗಳನ್ನು ಪ್ರದರ್ಶಿಸುವುದರ ಜೊತೆಗೆ, ಭಾರತದಲ್ಲಿ ಸ್ವತಂತ್ರ ಚಿತ್ರಕರ್ತರು ( ) ಎದುರಿಸುತ್ತಿರುವ ಸವಾಲುಗಳ ಬಗ್ಗೆ ಕೂಡ ಅಮೆರಿಕೆಯ ಮಾಧ್ಯಮಗಳೊಂದಿಗೆ ಚರ್ಚಿಸಲಿದ್ದಾರೆ.


2001ರಲ್ಲಿ ಆರಂಭವಾದಾಗಿನಿಂದ ಭಾರತ ಮತ್ತು ಅಮೆರಿಕೆಯಲ್ಲಿರುವ ಭಾರತೀಯ ಜನರ ನಡುವೆ ದೃಶ್ಯ ಸೇತುವೆಯಂತೆ ಕೆಲಸ ಮಾಡುತ್ತಿದೆ. ಕಳೆದ 25 ವರ್ಷಗಳಿಂದ ಇದು ಭಾರತದ ಚಿತ್ರ ಸಂಸ್ಕೃತಿಯನ್ನು ದೃಶ್ಯ ಪರಂಪರೆಯನ್ನು ಬಹಳ ವರ್ಷಗಳಿಂದ ಅಮೆರಿಕೆಯಲ್ಲಿ ನೆಲೆಸಿರುವ ಭಾರತೀಯರಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದರೆ ತಪ್ಪೇನಿಲ್ಲ. 1998ರಲ್ಲಿ ಆರಂಭವಾದ ಲಾಭದ ದೃಷ್ಟಿ ಹೊಂದಿರದ ನ್ಯೂಯಾರ್ಕ್ ನೆಲೆಯ ಭಾರತದ ಕಲೆ, ರಂಗಭೂಮಿ, ಸಾಹಿತ್ಯ, ಸಂಗೀತ ಮತ್ತುಸಂಸ್ಕೃತಿಯನ್ನು ಪ್ರೋತ್ಸಾಹಿಸಲು ತನ್ನೆಲ್ಲ ನೆರವು ನೀಡುತ್ತಿದೆ. ಈಗ ನಡೆಯುತ್ತಿರುವ ಒಂದು ರೀತಿಯಲ್ಲಿ ನ ಅತ್ಯಂತ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದು. ''ಏಕೆಂದರೆ, ಭಾಷೆಗೆ ಮೀರಿದ ದೃಶ್ಯ ಸಂಸ್ಕೃತಿ ಅತ್ಯಂತ ಶಕ್ತಿಯುತ ಮಾಧ್ಯಮವಾಗಿದ್ದು ಭಾರತದ ಬಹುತ್ವದ ಮಹತ್ವವನ್ನು ವಿಶ್ವಕ್ಕೆ ಪರಿಚಯಿಸಲು ತನ್ನೆಲ್ಲ ಪ್ರಯತ್ನ ಮಾಡುತ್ತಲೇ ಬಂದಿದೆ. ಇದುವರೆಗೆ ಸತ್ಯಜಿತ್ ರೇ, ಮೀರಾ ನಾಯರ್, ಅಪರ್ಣಾ ಸೇನ್, ಶ್ಯಾಮ್ ಬೆನೆಗಲ್, ಅಡೂರ್ ಗೋಪಾಲಕೃಷ್ಣನ್, ಮಣಿಕೌಲ್, ರಿತುಪರ್ಣ ಘೋಷ್ ಜೊತೆಗೆ ಹೊಸದಾಗಿ ದೃಶ್ಯ ಸಂಸ್ಕೃತಿಗೆ ತಮ್ಮ ಕೊಡುಗೆಯನ್ನು ನೀಡುತ್ತಿರುವ ಇಂದಿನ ತಲೆಮಾರಿನ ನೂರಾರು ನಿರ್ದೇಶಕರನ್ನು ಜಗತ್ತಿಗೆ ಪರಿಚಯಿಸುತ್ತಿದೆ. ಈ ಚಿತ್ರೋತ್ಸವ ಭಾರತದ ಸಾಮಾಜಿಕ ವಿಷಯಗಳನ್ನು ಜಗತ್ತಿಗೆ ತಲುಪಿಸಲು ನೆರವಾಗುತ್ತಿದೆ. ಅದು ವಲಸೆ ಇರಬಹುದು, ಜಾತಿ ಮತ್ತು ಲಿಂಗ ಬೇಧ, ಕೋಮು ಸೌಹಾರ್ದಕ್ಕೆ ಬಂದಿರುವ ಸಂಕಷ್ಟ, ಭಾರತದ ದುರ್ಬಲ ವರ್ಗ ಎದುರಿಸುತ್ತಿರುವ ಅಸ್ತಿತ್ವದ ಪ್ರಶ್ನೆ, ಹಳ್ಳಿಗಳು ನಗರೀಕೃತವಾಗುತ್ತಿರುವುದರಿಂದ ಸಂಸ್ಕೃತಿಯ ಮೇಲಾಗುತ್ತಿರುವ ಪರಿಣಾಮ ಇಂಥ ನೂರಾರು ಪ್ರಶ್ನೆಗಳನ್ನು ಮುಂದಿಡುವ ದೃಶ್ಯ ರೂಪಗಳನ್ನು ಜನರ ಮುಂದಿಡುತ್ತಿದೆ.

''ಅಮೆರಿಕೆಯ ಭಾರತೀಯ ಸಮುದಾಯ ಕೂಡ ಪ್ರತಿವರ್ಷ ಈ ಚಿತ್ರೋತ್ಸವಕ್ಕಾಗಿ ಕಾತುರದಿಂದ ಎದುರು ನೋಡುತ್ತಿರುತ್ತದೆ. ಆ ಕಾಲ ಅವರಿಗೆ ಮೇ 28ರಿಂದ ನಾಲ್ಕು ದಿನಗಳ ಕಾಲ ದಕ್ಕಲಿದೆ. ಭಾರತೀಯ ಸಮುದಾಯಕ್ಕೆ ಈ ಚಿತ್ರೋತ್ಸವ ಕೇವಲ ಮನರಂಜನೆಯ ಮಾಧ್ಯಮವಾಗಿ ಮಾತ್ರ ಮುಖ್ಯವಾಗುತ್ತಿಲ್ಲ. ಇದೊಂದು ರೀತಿಯಲ್ಲಿ ಅಂದಿನ ಎಂದಿನ ಭಾರತವನ್ನು ಅರ್ಥ ಮಾಡಿಕೊಳ್ಳುವ ಭಾವುಕವಾದ ಕೊಂಡಿ. ಇದರ ಜೊತೆಯಲ್ಲಿ ದೇಶ-ವಿದೇಶಗಳಿಂದ ಇಲ್ಲಿ ಸೇರಿರುವ ಸಿನಿಮಾ ಸಂಸ್ಕೃತಿಯನ್ನು ಪ್ರೀತಿಸುವವರಿಗೆ ಅಂದರೆ ಭಾರತೀಯರಲ್ಲದವರಿಗೂ ಕೇವಲ ಮನರಂಜನೆಯ ಪ್ರತಿನಿಧಿಯಾಗಿರುವ ಬಾಲಿವುಡ್ ನ ಮುಖ್ಯವಾಹಿನಿಯ ಚಿತ್ರಗಳನ್ನು ಹೊರತು ಪಡಿಸಿ ಭಾರತೀಯ ಸಮಾಜವನ್ನು ನಿಜರೂಪದಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತದೆ'' ಎನ್ನುತ್ತಾರೆ ಅಸೀಮ್.

ಅವರ ಮಾತುಗಳಲ್ಲೇ ಅರ್ಥ ಮಾಡಿಕೊಂಡರೆ, ಇಂದು ಇಂದು ಜಾಗತಿಕ ಮಟ್ಟದಲ್ಲಿ ಭಾರತದ ಚಿತ್ರಗಳ ಸ್ಥಾನಮಾನವನ್ನು ಗಟ್ಟಿಗೊಳಿಸಲು ಸಹಕಾರಿಯಾಗುತ್ತದೆ. ಇನ್ನೊಂದು ರೀತಿಯಲ್ಲಿ ಭಾರತದ ಭಾರತದ ಕಲೆ, ಅಸ್ತಿತ್ವ, ಸಾಂಸ್ಕೃತಿಕ ಕೊಡುಕೊಳ್ಳುವಿಕೆಯ ಮಾಧ್ಯಮವಾಗುವ ಸಾಧ್ಯತೆ ಇದೆ. ಈ ಎಲ್ಲ ಕಾರಣಗಳಿಂದಾಗಿ ಮೇ 28ರಿಂದ ಇಲ್ಲಿ ನಡೆಯಲಿರುವ ಇಲ್ಲಿನ ಭಾರತೀಯ ಸಮುದಾಯಕ್ಕೆ ಒಂದು ಬಹುಮುಖ್ಯ ಸಾಂಸ್ಕೃತಿಕ ಹಬ್ಬವಾಗಿದೆ. ಎಲ್ಲ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳಂತೆ, ವಿಶ್ವದ ಚಲನಚಿತ್ರ ಲೋಕದಲ್ಲಿ ನಡೆಯುತ್ತಿರುವ ಎಲ್ಲ ಆಗು-ಹೋಗುಗಳ ಬಗ್ಗೆ ಚರ್ಚೆ ನಡೆಯುತ್ತದೆ. ಚಿತ್ರ ನಿರ್ದೇಶಕರುಗಳು ತಮ್ಮ ಅನುಭವವನ್ನು ಎಳೆಎಳೆಯಾಗಿ ಚಿತ್ರಪ್ರೇಮಿಗಳಿಗಾಗಿ ಬಿಚ್ಚಿಡಲಿದ್ದಾರೆ. ಅಮೆರಿಕೆಯ ಚಿತ್ರೋದ್ಯಮ ಕೂಡ ಇದರಲ್ಲಿ ಪ್ರಮುಖ ಪಾತ್ರವಹಿಸಿ, ತನ್ನ ತಿಳಿವಳಿಕೆಯನ್ನು ಆಧುನಿಕ ತಂತ್ರಜ್ಞಾನದಿಂದ ಚಿತ್ರೋದ್ಯಮಕ್ಕೆ ಆಗುವ ಲಾಭದ ಬಗ್ಗೆ ತಿಳಿವಳಿಕೆ ಮೂಡಿಸಲಿದೆ. ಎಲ್ಲ ಚಿತ್ರೋತ್ಸವಗಳಂತೆ ಈ ಚಿತ್ರೋತ್ಸವದಲ್ಲಿ ತೀರ್ಪುಗಾರರ ಆಯ್ಕೆಯ ಉತ್ತಮ ಚಿತ್ರ, ಉತ್ತಮ ಕಿರುಚಿತ್ರ, ಕಥಾಚಿತ್ರ, ಸಾಕ್ಷ್ಯಚಿತ್ರ, ನಿರ್ದೇಶಕ, ನಟ, ನಟಿ, ಬಾಲ ಕಲಾವಿದ ಹಾಗು ಉತ್ತಮ ಚಿತ್ರಕಥೆಗೆ ಪ್ರಶಸ್ತಿಗಳನ್ನು ನೀಡಲಾಗುತ್ತದೆ.

ಬೆಳಗಾವಿ ಅಪಾರ ಜಲಸಂಪತ್ತು ಇದ್ದೂ, ತೀರದ ನೀರಿನ ದಾಹ

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನಲ್ಲಿ ಹಿಡಕಲ್ ಡ್ಯಾಮ್ ಮತ್ತು ಶಿರೂರು ಜಲಾಶಯಗಳು ಹಾಗೂ ಘಟಪ್ರಭಾ, ಹಿರಣ್ಯಕೇಶಿ ಮತ್ತು ಮಾರ್ಕಂಡೇಯ ಎಂಬ ಮೂರು ನದಿಗಳು ಹರಿಯುತ್ತಿದ್ದರೂ ಕೂಡ ಈ ಭಾಗದ ರೈತರ ಭೂಮಿಗಳಿಗೆ ನೀರಿಲ್ಲ. ಜನ-ಜಾನುವಾರುಗಳಿಗೆ ಕುಡಿಯುವ ನೀರು ಸಿಗದೆ ಪರದಾಡುವಂತಾಗಿದೆ.



ಹುಕ್ಕೇರಿ ತಾಲೂಕಿನಲ್ಲಿ ಶೇಕಡಾ 60 ರಷ್ಟು ಕೃಷಿ ಜಮೀನು ಮಳೆಯನ್ನೇ ಅವಲಂಬಿಸಿದೆ. ಶಾಶ್ವತ ನೀರಾವರಿ ವ್ಯವಸ್ಥೆ ಕೊರತೆಯಿಂದ ರೈತರು ನಿರಂತರ ಸಂಕಷ್ಟ ಅನುಭವಿಸುತ್ತಿದ್ದಾರೆ.ಸಮಸ್ಯೆ ಪರಿಹಾರವಾಗದ ಕುರಿತು ರೈತರು ತೀವ್ರ ಅಸಮಾಧಾನ ವ್ಯಕ್ತ ಪಡಿಸಿದ್ದು, ರಾಜಕಾರಣಿಗಳು ಹಾಗೂ ಜನಪ್ರತಿನಿಧಿಗಳ ವಿರುದ್ಧ ಹೋರಾಟಕ್ಕೆ ಇಳಿದಿದ್ದಾರೆ.

''ಕತ್ತಿ ಕುಟುಂಬ ಅತಿ ಹೆಚ್ಚು ಬಾರಿ ಹುಕ್ಕೇರಿ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸಿದೆ. ಆದರೆ ಈ ಭಾಗದ ರೈತರಿಗೆ ಸಮರ್ಪಕ ನೀರಾವರಿ ಯೋಜನೆಗಳನ್ನು ಒದಗಿಸುವಲ್ಲಿ ವಿಫಲವಾಗಿದೆ ಎಂಬ ಆರೋಪ ಕೇಳಿಬರುತ್ತಿದೆ. ದಿವಂಗತ ಉಮೇಶ ಕತ್ತಿಯವರು ಸಚಿವರಾಗಿಯೂ, ಶಾಸಕರಾಗಿಯೂ ಕಾರ್ಯ ನಿರ್ವಹಿಸಿದ್ದರೂ ಸಹ ಈ ಭಾಗದ ರೈತರ ಜಮೀನುಗಳಿಗೆ ಶಾಶ್ವತ ನೀರಾವರಿ ಸೌಲಭ್ಯ ಒದಗಿಸಲು ಸಾಧ್ಯವಾಗಿಲ್ಲ'' ಎಂಬ ಅಸಮಾಧಾನ ಜನರಲ್ಲಿ ಇದೆ.

''ಸಚಿವ ಸತೀಶ ಜಾರಕಿಹೊಳಿಯವರು ಪ್ರತಿನಿಧಿಸುವ ಯಮಕನಮರಡಿ ವಿಧಾನಸಭಾ ಕ್ಷೇತ್ರಕ್ಕೆ ಹುಕ್ಕೇರಿ ತಾಲೂಕಿನ 40ಕ್ಕೂ ಹೆಚ್ಚು ಹಳ್ಳಿಗಳು ಒಳಪಡುತ್ತವೆ. ಅವರು ರಾಜ್ಯ ಸರ್ಕಾರದಲ್ಲಿ ಪ್ರಭಾವಿ ಸ್ಥಾನದಲ್ಲಿದ್ದರೂ ಕೂಡ ಈ ಭಾಗಕ್ಕೆ ಸಮರ್ಪಕ ನೀರಾವರಿ ಯೋಜನೆಗಳನ್ನು ಒದಗಿಸುವಲ್ಲಿ ವಿಫಲರಾಗಿದ್ದಾರೆ'' ಎಂಬ ಆರೋಪ ರೈತರಿಂದ ಕೇಳಿಬರುತ್ತಿದೆ.

ನಮ್ಮಲ್ಲೇ ಸಾಕಷ್ಟು ಜಲಸಂಪನ್ಮೂಲಗಳಿವೆ. ಇಲ್ಲಿ ಎರಡು ಜಲಾಶಯಗಳಿವೆ, ಮೂರು ನದಿಗಳು ಹರಿಯುತ್ತವೆ. ಇಂತಹ ಸಮೃದ್ಧ ಜಲ ಸಂಪತ್ತಿನ ನಡುವೆಯೂ ರೈತರು ನೀರಿಗಾಗಿ ಪರದಾಡಲು ಕಾರಣವೇನು,? ಎಂಬುದು ಹುಕ್ಕೇರಿ ತಾಲೂಕಿನ ರೈತರ ಪ್ರಶ್ನೆ.

''ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹಿಡಕಲ್ ಜಲಾಶಯದಿಂದ ಸುಮಾರು 110 ಕಿ.ಮೀ. ದೂರ ಪೈಪ್‌ಲೈನ್ ಮೂಲಕ ಧಾರವಾಡ ಕೈಗಾರಿಕಾ ಪ್ರದೇಶಕ್ಕೆ ನೀರು ಒದಗಿಸುತ್ತಿರುವ ವಿಷಯವು ಈಗ ಸ್ಥಳೀಯ ರೈತರಲ್ಲಿ ಚರ್ಚೆಗೆ ಕಾರಣವಾಗಿದ್ದು, ನಮ್ಮ ತಾಲೂಕಿನ ರೈತರ ಸಮಸ್ಯೆಗಳು ಇವರ ಕಣ್ಣಿಗೆ ಕಾಣಿಸುವದಿಲ್ಲವೆ'' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹುಕ್ಕೇರಿ ತಾಲ್ಲೂಕಿನ ರೈತರ ಪ್ರಮುಖ ಬೇಡಿಕೆಗಳು:

1.ಸಂಕೇಶ್ವರ್ ಹಾಗೂ ಹುಕ್ಕೇರಿ ನಗರಗಳಲ್ಲಿ ಹುಕ್ಕೇರಿ ತಾಲೂಕಿನ ಎಲ್ಲ ಗ್ರಾಮಗಳಲ್ಲಿ 247 ಕುಡಿಯುವ ನೀರಿನ ಯೋಜನೆ ಇದ್ದು ಅದು ಇದುವರೆಗೂ ಸಮರ್ಪಕವಾಗಿ ಅನುಷ್ಠಾನವಾಗಿರುವುದಿಲ್ಲ, ಎರಡು ಮೂರು ದಿನಗಳಿಗೊಮ್ಮೆ ನೀರು ಸರಬರಾಜು ಆಗುತ್ತಿದ್ದು ಈ ಸಮಸ್ಯೆಗೆ ಪರಿಹಾರ ಒದಗಿಸಬೇಕು.

2.ಮಲ್ಲಿಕಾರ್ಜುನ ಏತ ನೀರಾವರಿ ಯೋಜನೆಯಲ್ಲಿ ಹುಕ್ಕೇರಿ, ಯಾದಗೂಡ ದಿಂದ ಕಣಗಲಾದವರೆಗೆ ಸುಮಾರು 21 ಹಳ್ಳಿಗಳು ಹಾಗೂ 9350 ಹೆಕ್ಟೇರ್ ಕೃಷಿ ಜಮೀನು ಸಂಪೂರ್ಣ ನೀರಾವರಿಯಾಗುತ್ತದೆ. ಸದರಿ ಯೋಜನೆಯ ಅಂದಾಜು ವೆಚ್ಚ 780 ಕೋಟಿ ಇದ್ದು ಸದರಿ ವೆಚ್ಚವನ್ನು ಈ ಕೂಡಲೇ ರಾಜ್ಯ ಸರ್ಕಾರ ಮಂಜೂರು ಮಾಡಬೇಕು.

3.ಶಿಪ್ಪರ ದಿಂದ ಹಡಲಗಾದವರೆಗೆ 12 ಗ್ರಾಮಗಳಿಗೆ ಹೊಸದಾಗಿ ಏತ ನೀರಾವರಿ ಯೋಜನೆ ಪ್ರಾರಂಭ ಮಾಡಬೇಕು.

4.ಕುರಣಿ ಏತ ನೀರಾವರಿ ಯೋಜನೆಯ ಕಾಲುವೆ ಆಧುನೀಕರಣಕ್ಕೆ ಸುಮಾರು 107 ಕೋಟಿ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಯೋಜನೆಯಿಂದ ಸುಮಾರು 09 ಹಳ್ಳಿಗಳು ಹಾಗೂ 1610 ಹೆಕ್ಟೇರ್ ಕೃಷಿ ಜಮೀನುಗಳಿಗೆ ಸಂಪೂರ್ಣ ನೀರಾವರಿ ವ್ಯವಸ್ಥೆ ಕಲ್ಪಿಸಿದಂತಾಗುತ್ತದೆ.

5.ಕೋಚರಿ ಏತ ನೀರಾವರಿ ಯೋಜನೆಯ ಕಾಲುವೆ ಆಧುನೀಕರಣಕ್ಕೆ 90.29 ಕೋಟಿ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಯೋಜನೆಯಿಂದ ಸುಮಾರು 12 ಹಳ್ಳಿಗಳು ಹಾಗೂ 1712 ಹೆಕ್ಟೇರ್ ಕೃಷಿ ಜಮೀನಿಗೆ ನೀರಾವರಿ ಒದಗುತ್ತದೆ.

6.ರುಸ್ತೂಂಪುರ ಏತ ನೀರಾವರಿ ಯೋಜನೆಯ ಕಾಲುವೆ ಆಧುನೀಕರಣಕ್ಕೆ 15.00 ಕೋಟಿ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಯೋಜನೆಯಿಂದ ಸುಮಾರು 10 ಹಳ್ಳಿಗಳು ಹಾಗೂ 2709 ಹೆಕ್ಟೇರ್ ಕೃಷಿ ಜಮೀನುಗಳಿಗೆ ನೀರಾವರಿ ಸೌಲಭ್ಯ ದೊರಕಿಸಬಹುದು.

7.ದಡ್ಡಿ-ನಾಗನೂರ ಏತ ನೀರಾವರಿ ಯೋಜನೆಯ ಕಾಲುವೆ ಆಧುನೀಕರಣ ಆಗುವುದಾಗಬೇಕು, ಸದರಿ ಯೋಜನೆಯಿಂದ ಸುಮಾರು 14 ಹಳ್ಳಿಗಳು ಹಾಗೂ 1980 ಹೆಕ್ಟೇರ್ ಕೃಷಿ ಜಮೀನಿಗೆ ನೀರಾವರಿ ಯೋಜನೆ ದೊರಕುತ್ತದೆ.

8.ಅರಳಿಕಟ್ಟಿ ಮತ್ತು ಜಾರಕಿಹೊಳಿ ಏತ ನೀರಾವರಿ ಯೋಜನೆ ನಿರ್ಮಾಣ.

9.ಹತ್ತರಗಿ ಮತ್ತು ಗುಡಗನಟ್ಟಿ ಏತ ನೀರಾವರಿ ಯೋಜನೆ ನಿರ್ಮಾಣ.

10.ಉಳ್ಳಾಗಡ್ಡಿ ಖಾನಾಪೂರ ಕೆರೆ ತುಂಬುವ ಯೋಜನೆಯ 06 ಕೋಟಿ ರೂ. ಅಂದಾಜು ವೆಚ್ಚ ಪ್ರಸ್ತಾವನೆ ಸಲ್ಲಿಸಿದ್ದು, ಇದರಿಂದ ಚಿಕ್ಕಾಲಗುಡ್ಡ, ಉಳ್ಳಾಗಡ್ಡಿ ಖಾನಾಪೂರ ಗ್ರಾಮಗಳಿಗೆ ಯೋಜನೆಯ ಲಾಭವಾಗಲಿದ್ದು 670 ಹೆಕ್ಟೇರ್ ಜಮೀನು ಸಂಪೂರ್ಣ ನೀರಾವರಿ ಆಗಲಿದೆ.

11.ಅಡವಿ ಸಿದ್ದೇಶ್ವರ ಶಂಕರಲಿಂಗ ಏತ ನೀರಾವರಿ ಯೋಜನೆಗಳು ಇದುವರೆಗೆ ಕೆಲಸ ಪ್ರಗತಿಯಲ್ಲಿದ್ದು, ಅವುಗಳು ಆದಷ್ಟು ಬೇಗ ರೈತರಿಗೆ ಉಪಯೋಗಿಸಲು ಕ್ರಮಕೈಗೊಳ್ಳಬೇಕು.

12.ಹಿಡಕಲ್ಲ ಡ್ಯಾಮ್ ಹೂಳೆತ್ತಬೇಕು.

13.ಬೈರಾಪುರ ಕೆರೆಯಲ್ಲಿನ ಸಂಪೂರ್ಣ ಹೂಳೆತ್ತಬೇಕು ಬೈರಾಪುರ ಕೆರೆಯಿಂದ ಎರಡು ಕಾಲುವೆಗಳು ಇದ್ದು ಅವು ಸಂಪೂರ್ಣ ಹಾಳಾಗಿದ್ದು ಅವುಗಳನ್ನು ರಿಪೇರಿ ಮಾಡಲೇಬೇಕು ಮತ್ತು ತಾಲೂಕಿನ ಬಹಳಷ್ಟು ಕೆರೆಗಳು ನೀರು ಬಸಿಯುತ್ತಿದ್ದು ನೀರು ಬಸಿಯದಂತೆ ನೋಡಿಕೊಳ್ಳಬೇಕು.

14.ಹುಕ್ಕೇರಿ ತಾಲೂಕಿನ 33 ಕೆರೆಗಳನ್ನು (ಸಣ್ಣ ನೀರಾವರಿ ಇಲಾಖೆ ಹಾಗೂ ಜಿಲ್ಲಾ ಪಂಚಾಯತಿ) ಹಿರಣ್ಯಕೇಶಿ ನದಿಯಿಂದ ನೀರು ತುಂಬುವ ಯೋಜನೆ ಹೆಸರಿಗಷ್ಟೇ ಇದೆ, ಸಂಪೂರ್ಣ ನೀರು ತುಂಬಲು ಪ್ರಾರಂಭ ಮಾಡಬೇಕು ಹುಕ್ಕೇರಿ ತಾಲೂಕಿನಲ್ಲಿ ಒಟ್ಟು 47ಕೆರೆಗಳಿದ್ದು ಆ ಕೆರೆಗಳ ನೀರಿನಿಂದ 4854ಹೆಕ್ಟೇರ್ ಕೃಷಿ ಜಮೀನು ಸಂಪೂರ್ಣ ನೀರಾವರಿ ಆಗುತ್ತದೆ.

ಈ ಕುರಿತು ಈ ದಿನ.ಕಾಮ್ ಜತೆ ಮಾತನಾಡಿದ ಶಿವಪ್ಪ, ''ನಮ್ಮ ತಾಲೂಕಿನಲ್ಲಿ ಹಿಡಕಲ್ ಡ್ಯಾಮ್, ಶಿರೂರು ಜಲಾಶಯ ಹಾಗೂ ಘಟಪ್ರಭಾ, ಹಿರಣ್ಯಕೇಶಿ, ಮಾರ್ಕಂಡೇಯ ನದಿಗಳು ಹರಿಯುತ್ತಿವೆ. ಇಷ್ಟೊಂದು ಜಲಸಂಪನ್ಮೂಲ ಇದ್ದರೂ ನಮ್ಮ ಹೊಲಗಳಿಗೆ ನೀರು ಸಿಗುತ್ತಿಲ್ಲ. ನಾವು ನೀರಿಗಾಗಿ ಪರದಾಡುವ ಸ್ಥಿತಿ ಬಂದಿದೆ'' ಎಂದು ಸಮಸ್ಯೆ ತೋಡಿಕೊಂಡರು.

ರೈತ ಸಿದ್ದಪ್ಪ ಮಾತನಾಡಿ, ''ಶೇಕಡಾ 60 ರಷ್ಟು ಕೃಷಿ ಜಮೀನು ಮಳೆಯನ್ನೇ ಅವಲಂಬಿಸಿದೆ. ಮಳೆ ಕೈಕೊಟ್ಟರೆ ನಮ್ಮ ಬದುಕೇ ಸಂಕಷ್ಟಕ್ಕೆ ಸಿಲುಕುತ್ತದೆ. ಶಾಶ್ವತ ನೀರಾವರಿ ವ್ಯವಸ್ಥೆ ಅಗತ್ಯವಾಗಿದೆ. ಈ ಕುರಿತು ಅಧಿಕಾರಿಗಳು ರಾಜಕಾರಣಿಗಳು ಗಮನ ಹಿಸಬೇಕು'' ಎಂದು ಆಗ್ರಹಿಸಿದರು.

ರೈತ ಪ್ರಕಾಶ ಮಾತನಾಡಿ, '' ಪ್ರಭಾವಿ ರಾಜಕಾರಣಿಗಳು ಇದ್ದರೂ ಈ ಊರಿನ ನೀರಾವರಿ ಸಮಸ್ಯೆ ಇನ್ನೂ ಬಗೆಹರಿಯಲಿಲ್ಲ. ನಮ್ಮ ಹೊಲಗಳಿಗೆ ನೀರು ತಲುಪಿಸುವಲ್ಲಿ ನಿರಂತರ ವಿಳಂಬ ನಡೆದಿದೆ. ರೈತರ ಕುರಿತು ಇಲಾಖೆಗೂ, ಅಧಿಕಾರಿಗಳಿಗೂ ಕಾಳಜಿ ಇಲ್ಲದಂತಾಗಿದೆ'' ಎಂದು ಆರೋಪಿಸಿದರು.

ರೈತ ಲಕ್ಷ್ಮಣ ಮಾತನಾಡಿ ''ನಮ್ಮ ಜಲಾಶಯಗಳ ನೀರು ಬೇರೆಡೆಗೆ ಹರಿಯುತ್ತಿದೆ. ಆದರೆ, ನಮ್ಮ ತಾಲ್ಲೂಕಿನ ರೈತರಿಗೆ ಮಾತ್ರ ನೀರಿಲ್ಲದೆ ಪರದಾಡುವ ಸಂಕಷ್ಟ ಒದಗಿದೆ, ಆದಷ್ಟು ಬೇಗ ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು'' ಎಂದು ಮನವಿ ಮಾಡಿದರು.

ಹುಕ್ಕೇರಿ ತಾಲೂಕಿನಲ್ಲಿ ಅಪಾರ ಜಲಸಂಪನ್ಮೂಲಗಳು ಇದ್ದರೂ ರೈತರು ನೀರಾವರಿ ಮತ್ತು ಕುಡಿಯುವ ನೀರಿಗಾಗಿ ಹೋರಾಟ ನಡೆಸುತ್ತಿರುವುದು ಆಡಳಿತ ವ್ಯವಸ್ಥೆಯ ಗಂಭೀರ ವೈಫಲ್ಯವನ್ನು ಸೂಚಿಸುತ್ತದೆ. ಜಲಾಶಯಗಳು ಹಾಗೂ ನದಿಗಳು ಇದ್ದರೂ ಜನರು ನೀರಿಗಾಗಿ ಪರದಾಡುತ್ತಿರುವುದು ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ರಾಜಕಾರಣಿಗಳ ನಿರಾಸಕ್ತಿಯನ್ನು ತೋರಿಸುತ್ತದೆ.

ರೈತರು ನಿರಂತರವಾಗಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದರೂ ಶಾಶ್ವತ ಪರಿಹಾರ ದೊರಕದಿರುವುದು ವಿಷಾದನೀಯ. ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದು ಸರ್ಕಾರ ಹಾಗೂ ಜನಪ್ರತಿನಿಧಿಗಳ ಕರ್ತವ್ಯವಾಗಿದೆ.

ರೈತರ ಹೊಲಗಳಿಗೆ ನೀರು ತಲುಪಿದಾಗ ಮಾತ್ರ ಗ್ರಾಮೀಣ ರೈತರ ಆರ್ಥಿಕತೆ ಬಲಗೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ರಾಜಕೀಯ ಚರ್ಚೆಗಳಿಗಿಂತಲೂ ಹೆಚ್ಚಾಗಿ ನೀರಾವರಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಈ ಭಾಗದ ಸಚಿವರು, ಶಾಸಕರು ಆದ್ಯತೆ ನೀಡುವುದು ಅವಶ್ಯಕವಾಗಿದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR